MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 289 | ಬುಧವಾರ :03-09-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 289 | WEDNESDAY : 03-09-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ದೆಹಲಿ, ಸೇರಿ ಉತ್ತರ ಭಾರತದಲ್ಲಿ ಮಳೆಯಬ್ಬರ, ಜನಜೀವನ ಅಸ್ತವ್ಯಸ್ತ



**ನವದೆಹಲಿ, ಸೆ.02–** ರಾಷ್ಟ್ರದ ರಾಜಧಾನಿ ದೆಹಲಿ ಸೇರಿದಂತೆ ಉತ್ತರ ಭಾರತದಲ್ಲಿ ಭಾರಿ ಮಳೆ ಮುಂದುವರಿದಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ.ಇತ್ತ ದೆಹಲಿ, ಪಂಜಾಬ್‌ನಲ್ಲಿ ಸೆ.3 ತನಕ ಶಾಲಾ–ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ.

ಇನ್ನೊಂದೆಡೆ ವಾಹನ ದಟ್ಟಣೆ, ಯಮುನಾ ನದಿಯ ನೀರಿನ ಮಟ್ಟ ಹೆಚ್ಚಾಗುತ್ತಿದೆ. ಪರಿಣಾಮ ತಗ್ಗು ಪ್ರದೇಶದಲ್ಲಿರುವ ಜನರು ಪ್ರವಾಹದ ಭೀತಿಗೊಳಗಾಗಿದ್ದಾರೆ.

ಹರಿಯಾಣ, ದೆಹಲಿ ಭಾಗಗಳಲ್ಲಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಪ್ರವಾಹ ಸ್ಥಿತಿಯಲ್ಲಿ ಯಮುನಾ ನದಿ ಹರಿಯುತ್ತಿದೆ. ನಿರಂತರ ಮಳೆ ಮುಂದುವರಿದರೆ ಜನವಸತಿ ಪ್ರದೇಶಕ್ಕೆ ನೀರು ನುಗ್ಗುವ ಸಾಧ್ಯತೆ ಇದ್ದು, ತಗ್ಗು ಪ್ರದೇಶದಲ್ಲಿರುವ ಜನರಿಗೆ ಸ್ಥಳಾಂತರಕ್ಕೆ ಸೂಚನೆ ನೀಡಲಾಗಿದೆ.

ಪಂಜಾಬ್, ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರಸ್ತುತ ಆರೆಂಜ್ ಅಲರ್ಟ್ ಘೋಷಿಸಲಾಗಿದ್ದು, ಪಂಜಾಬ್‌ನಲ್ಲಿ ಈವರೆಗೂ 10 ಕ್ಕೂ ಹೆಚ್ಚು ಜಿಲ್ಲೆಗಳು ಜಲಾವೃತಗೊಂಡಿವೆ. ಕನಿಷ್ಠ 29 ಮಂದಿ ಸಾವನ್ನಪ್ಪಿದ್ದಾರೆ. ಪಂಜಾಬ್‌ನಾದ್ಯಂತ 1,300 ಕ್ಕೂ ಹೆಚ್ಚು ಗ್ರಾಮಗಳು ಮುಳುಗಿ ಹೋಗಿದ್ದು, 6,582 ಜನರನ್ನು 122 ಪರಿಹಾರ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.

ಉತ್ತರ ಪ್ರದೇಶದ 22 ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಎಚ್ಚರಿಕೆ ನೀಡಲಾಗಿದೆ. ಪ್ರತಾಪ್‌ಗಢ, ಸೋನ್‌ಭದ್ರ, ಮಿರ್ಜಾಪುರ್, ಭದೋಹಿ, ಜೌನ್‌ಪುರ್, ಹರ್ದೋಯಿ, ಫರೂಖಾಬಾದ್, ಕನೌಜ್, ಕಾನ್ಪುರ್ ಗ್ರಾಮಾಂತರ, ಬಾಗ್‌ಪತ್, ಮೀರತ್, ಅಲಿಗಢ, ಮಥುರಾ, ಹತ್ರಾಸ್, ಕಾಸ್‌ಗಂಜ್‌ನಲ್ಲಿ ಮಳೆ ಎಚ್ಚರಿಕೆ ನೀಡಲಾಗಿದೆ. ಈ ಹಿನ್ನೆಲೆ ಇಂದು ಮತ್ತು ನಾಳೆ ಶಾಲೆಗಳಿಗೆ ರಜೆ ಘೋಷಣೆ ಮಾಡಲಾಗಿದೆ.

ಯಮುನಾ ನದಿಯ ನೀರಿನ ಮಟ್ಟ ಹೆಚ್ಚಳ(**2ನೇಪುಟಕ್ಕೆ**)

## ರೈತರಿಗೆ ಸಮರ್ಪಕ ಗೊಬ್ಬರ ವಿತರಣೆಗೆ ಕ್ರಮವಹಿಸಿ: ಶಾಸಕ ಬಸನಗೌಡ ದದ್ದಲ್ ಕಟ್ಟುನಿಟ್ಟಿನ ನಿರ್ದೇಶನ

**ಯುವ ಮಾರ್ಗ ಸುದ್ದಿ**

**ರಾಯಚೂರು.ಸೆ.2–** ಯಾವುದೇ ರೈತರು ಸರದಿ ಸಾಲಲಿ ನಿಂತು ಕಾಯದಂತೆ, ಸಣ್ಣ ರೈತರು ಸೇರಿದಂತೆ ಎಲ್ಲರಿಗೂ ಸಮರ್ಪಕ ಗೊಬ್ಬರ ವಿತರಣೆಗೆ ಅಗತ್ಯ ಕ್ರಮವಹಿಸಬೇಕು ಎಂದು ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರ ಗ್ರಾಮೀಣ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಕೃಷಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.



ರಾಯಚೂರ ತಾಲೂಕು ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಸೆ.2ರಂದು ನಡೆದ ರಾಯಚೂರು ತಾಲೂಕು ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮೊದಲನೇ ಬೆಳೆಗೆ ಸಹಜವಾಗಿ ರಸಗೊಬ್ಬರದ ಬೇಡಿಕೆ ಹೆಚ್ಚಿರುತ್ತದೆ. ಎರಡನೇ ಬೆಳೆಗೆ ಒತ್ತಡ ಇರುವುದಿಲ್ಲ. ಗೊಂದಲಕ್ಕೆ ಅವಕಾಶವಿಲ್ಲದ ಹಾಗೆ ಶಿಸ್ತುಬದ್ಧವಾಗಿ ರಸಗೊಬ್ಬರ ವಿತರಣೆಯಾಗಬೇಕು ಎಂದು ಶಾಸಕರು ಸೂಚನೆ ನೀಡಿದರು.



ರಾಯಚೂರ ತಾಲೂಕಿನ ಯೂರಿಯಾ ರಸಗೊಬ್ಬರದ ಮುಂಗಾರು ಬೇಡಿಕೆ 16,592 ಮೆಟ್ರಿಕ್ ಟನ್ ಇರುತ್ತದೆ. ಅದರಲ್ಲಿ ಆಗಸ್ಟ್ ಮಾಹೆಯ ಅಂತ್ಯದವರೆಗೆ 13,430 ಮೆಟ್ರಿಕ್ ಟನ್ ರಷ್ಟು ಬೇಡಿಕೆ ಇದ್ದು, ಈ ಪೈಕಿ ಇದುವರೆಗೆ 12,484 ರಷ್ಟು ಗೊಬ್ಬರ ವಿವಿಧ ಮಳಿಗೆಗಳಿಂದ ಮಾರಾಟವಾಗಿದ್ದು, 1994 ಮೆಟ್ರಿಕ್ ಟನ್ ದಷ್ಟು ದಾಸ್ತಾನು ಇರುತ್ತದೆ. ರಾಯಚೂರ ತಾಲೂಕಿನಲ್ಲಿ ಸಕ್ರಿಯವಾಗಿ ರಸಗೊಬ್ಬರ ವಿತರಣೆಯಲ್ಲಿ ತೊಡಗಿರುವ ಎಲ್ಲ ಸಹಕಾರಿ ಸಂಘಗಳಿಗೆ ಜಿಲ್ಲೆಯಿಂದ ಬಪ್ಪರ್ ಸ್ಟಾಕ್ ವಿತರಣೆಯಾಗುತ್ತಿದ್ದು, ಅದರಲ್ಲಿ ಈವರೆಗೆ ಒಟ್ಟು 1737 ಮೆಟ್ರಿಕ್ ಟನ್ ರಷ್ಟು ಯೂರಿಯಾ ಹಾಗೂ 809 ಮೆಟ್ರಿಕ್ ಟನ್ ರಷ್ಟು ಡಿಎಪಿ ರಸಗೊಬ್ಬರವನ್ನು ಹಂಚಿಕೆ ಮಾಡಲಾಗಿದೆ ಎಂದು ಕೃಷಿ ಇಲಾಖೆಯ ಅಧಿಕಾರಿ ದೀಪಾ ಎಲ್ ಅವರು ಸಭೆಗೆ ಮಾಹಿತಿ ನೀಡಿದರು.

ತೋಟಗಾರಿಕೆ ಬೆಳೆ ಕ್ಷೇತ್ರ ಹೆಚ್ಚಾಗಲಿ: ರಾಯಚೂರ ಗ್ರಾಮೀಣ ಪ್ರದೇಶದಲ್ಲಿ ತೋಟಗಾರಿಕಾ ಬೆಳೆ ಕೃಷಿ ಪ್ರದೇಶ ವಿಸ್ತರಣೆಯಾಗಬೇಕು. ತೋಟಗಾರಿಕಾ ಬೆಳೆಗಾರರಿಗೆ ಹನಿ ನೀರಾವರಿ ಸೇರಿದಂತೆ ಪ್ರೋತ್ಸಾಹದಾಯಕ ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ಕೊಡಬೇಕು.

ರೈತರ ಬೇಡಿಕೆಗನುಸಾರ ತೋಟಗಾರಿಕಾ ಸಸಿಗಳ ವಿತರಣೆಗೆ ಕ್ರವಹಿಸಬೇಕು ಎಂದು ಶಾಸಕರು, ತೋಟಗಾರಿಕಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಿಗೆ ಸೂಚನೆ ನೀಡಿದರು. ರಾಯಚೂರ ಗ್ರಾಮೀಣ ಕ್ಷೇತ್ರದಲ್ಲಿ ಮಾವು, ಮೋಸಂಬಿ, ಡ್ರಾಗನ್ ಬೆಳೆಗೆ ಹೆಚ್ಚಿನ ಪ್ರೋತ್ಸಾಹ ನೀಡಲು ಒತ್ತು ಕೊಡಬೇಕು ಎಂದು ಶಾಸಕರು ಸೂಚನೆ ನೀಡಿದರು.

ರಾಯಚೂರ ಗ್ರಾಮೀಣ ಕ್ಷೇತ್ರದಲ್ಲಿ 300 ಹೆಕ್ಟೇರನಷ್ಟು ಇದ್ದ ಮಾವು ಬೆಳೆ ಪ್ರದೇಶವು ಇದೀಗ 350ನಷ್ಟು ಹೆಚ್ಚಳವಾಗಿದೆ. ಈ ಬಾರಿ ಕೆಲ ರೈತರು ಪೇರಲ ಬೆಳೆಗೆ ಆಸಕ್ತಿ ತೋರಿದ್ದಾರೆ. ನರೇಗಾ ಯೋಜನೆಯಡಿ 57,000 ಮಾನವ ದಿನಗಳ ಗುರಿ ಇದ್ದು ಈ ಪೈಕಿ 6000 ಗುರಿ ಸಾಧನೆಯಾಗಿದೆ. ನರೇಗಾ ಯೋಜನೆಗೆ ಹೊಸದಾಗಿ 350 ಅಪ್ಲಿಕೇಶನ್ ಬಂದಿದ್ದು, ಅಕ್ಟೋಬರ್ ಮಾಹೆಯಲ್ಲಿ ಕ್ರಿಯಾಯೋಜನೆ ತಯಾರಿಸಿ ಜಿಪಂಗೆ ಸಲ್ಲಿಸಲಾಗುವುದು ಎಂದು ತೋಟಗಾರಿಕಾ ಇಲಾಖೆಯ ಅಧಿಕಾರಿ ಸುರೇಶ ಕುಮಾರ ಸಭೆಗೆ ಮಾಹಿತಿ ನೀಡಿದರು. **(2ನೇ ಘುಟಕ್ಕೆ)**

## ಬಸವ ಸಂಸ್ಕೃತಿ ಅಭಿಯಾನ ಯಶಸ್ವಿಗೆ ಕರೆ

**ಯುವ ಮಾರ್ಗ ಸುದ್ದಿ**




**ಲಿಂಗಸುಗೂರು,ಸೆ.2–** ಲಿಂಗಾಯತ ಮಠಾಧಿಪತಿಗಳ ಒಕ್ಕೂಟದಿಂದ ರಾಜ್ಯದಲ್ಲಿ ಹಮ್ಮಿಕೊಂಡಿರುವ ಬಸವ ಸಂಸ್ಕೃತಿಕ ಅಭಿಯಾನದ ನಿಮಿತ್ಯ ಜಿಲ್ಲಾ ಕೇಂದ್ರ ರಾಯಚೂರಲ್ಲಿ ಸೆ.05ಕ್ಕೆ ಜರುಗಲಿರುವ ಸಮಾರಂಭದಲ್ಲಿ ಸಮುದಾಯ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಅಭಿಯಾನವನ್ನು ಯಶಸ್ವಿಗೊಳಿಸಬೇಕು. ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಅದ್ಯಕ್ಷ ಶರಣಪ್ಪ ಮೇಟಿ ಕರೆ ಕೊಟ್ಟರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಸೆ.1ರಂದು ಬಸವನ ಬಾಗೇವಾಡಿಯಿಂದ ಆರಂಭವಾಗುವ ಸಂಸ್ಕೃತಿ ಅಭಿಯಾನದ ಯಾತ್ರೆ ನಾಡಿನ ಎಲ್ಲಾ ಜಿಲ್ಲೆಗಳಿಗೆ ಸಂಚರಿಸಿ ಅ.1ರಂದು ಬೆಂಗಳೂರಿನಲ್ಲಿ ಸಮಾರೋಪಗೊಳ್ಳುತ್ತದೆ. ಅದರ ಭಾಗವಾಗಿ ರಾಯಚೂರು ಜಿಲ್ಲಾ ಕೇಂದ್ರದ ಗಂಜ್ ಕಲ್ಯಾಣ ಮಂಟಪದಲ್ಲಿ ಸೆ.5ಕ್ಕೆ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಸರ್ವ ಸಮುದಾಯದ ಮಠಾಧಿಪತಿಗಳು, ಮುಖಂಡರುಗಳು, ಸಚಿವರು, ಸಂಸದರು, ಶಾಸಕರುಗಳು ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯ ಬಾಂಧವರು ಪಾಲ್ಗೊಳ್ಳುವ ಮೂಲಕ ಯಶಸ್ವಿಗೊಳಿಸಬೇಕು. ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಅಮರಗುಂಡಪ್ಪ ಮೇಟಿ, ಡಾ. ಶಿವಬಸಪ್ಪ, ಭೂಪನಗೌಡ ಕರಡಕಲ್, ಬಸವಂತರಾಯ ಕುರಿ, ಮಹಾಂತೇಶ ಪಾಟೀಲ್, ಎನ್. ಬಸವರಾಜ, ನಿಂಬಣ್ಣಕರಡಕಲ್, ಸಂಗಣ್ಣ ಹೊಸೂರು ಸೇರಿ ಇತರರಿದ್ದರು.

## ಹಿರಿಯ ಪ್ರಾಥಮಿಕ, ಪ್ರೌಢಶಾಲೆಗಳ ಕ್ರೀಡಾಕೂಟಕ್ಕೆ ಮಹಾಪೌರರಿಂದ ಚಾಲನೆ

**ಯುವ ಮಾರ್ಗ ಸುದ್ದಿ**

**ರಾಯಚೂರು,ಸೆ.2–** ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ರಾಯಚೂರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ರಾಯಚೂರು, ಸಮೂಹ ಸಂಪನ್ಮೂಲ ಕೇಂದ್ರ ಪೂರ್ವ ವಲಯ, ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ, ಅನುದಾನಿತ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ರಾಯಚೂರ ಇವರ ಸಂಯುಕ್ತಾಶ್ರಯದಲ್ಲಿ ನಗರದ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಸೆಪ್ಟೆಂಬರ್ 2ರಂದು ಮತ್ತು ಸೆಪ್ಟೆಂಬರ್ 3ರಂದು ನಡೆಯಲಿರುವ ಗಾಜಗಾರ ಪೇಟೆ ಹೋಬಳಿ ಮಟ್ಟದ ಹಿರಿಯ ಪ್ರಾಥಮಿಕ ಶಾಲೆಗಳ ಮತ್ತು ಮಲಿಯಬಾದ ವಲಯ ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟಕ್ಕೆ ರಾಯಚೂರು ಮಹಾನಗರ ಪಾಲಿಕೆಯ ಮಹಾಪೌರರಾದ ನರಸಮ್ಮ ನರಸಿಂಹಲು ಮಾಡಿಗಿರಿ ಅವರು ಚಾಲನೆ ನೀಡಿದರು.




ಈ ವೇಳೆ ಮಾತನಾಡಿದ ಅವರು, ಸದೃಢವಾದ ಆರೋಗ್ಯ ಹೊಂದಲು ಕ್ರೀಡೆಗಳು ಸಹಕಾರಿಯಾಗಿದೆ. ವಿದ್ಯಾರ್ಥಿಗಳು ಓದಿನ ಜೊತೆಗೆ ಕ್ರೀಡೆಗಳಲ್ಲಿ ಭಾಗಿಯಾಗಬೇಕು. ಓದಿನಷ್ಟೇ ಆರೋಗ್ಯವು ಸಹ ತುಂಬಾ ಮುಖ್ಯವಾಗಿದೆ. ವಿದ್ಯಾರ್ಥಿಗಳು ತಮ್ಮ ಬಿಡುವಿನ ಅವಧಿಯನ್ನು ಕ್ರೀಡಾಂಗಣದಲ್ಲಿ ಕಳೆಯಬೇಕು ಎಂದು ಸಲಹೆ ಮಾಡಿದರು.

ಇದೇ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಸದಸ್ಯರಾದ ಹೇಮಲತಾ ಬೂದೆಪ್ಪ, ಎನ್.ಕೆ.ನಾಗರಾಜ್ ಸೇರಿದಂತೆ ವಿವಿಧ ಶಾಲೆಗಳ ಮುಖ್ಯ ಗುರುಗಳು, ಸಹ ಶಿಕ್ಷಕರು, ದೈಹಿಕ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

### ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಕುರಿತು ಅರಿವು ಕಾರ್ಯಕ್ರಮ

## ದುಡುಕಿನ ನಿರ್ಧಾರದಿಂದ ಜೀವನ ನಾಶ ಮಾಡಿಕೊಳ್ಳದಿರಲು ಸಲಹೆ

**ಯುವ ಮಾರ್ಗ ಸುದ್ದಿ**




**ಮಾನ್ವಿ,ಸೆ.02–** ಪಟ್ಟಣದ ಬಾಷುಮಿಯಾ ಸಾಹುಕಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ "ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಮತ್ತು ಆತ್ಮಹತ್ಯೆ ತಡೆ" ಎಂಬ ಶೀರ್ಷಿಕೆ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮದಲ್ಲಿ ಇಂಗ್ಲೀಷ್ ವಿಭಾಗದ ಮುಖ್ಯಸ್ಥರು ಡಾ.ಸೈಯದ್ ಮುಜೀಬ್ ಅಹ್ಮದ್ ಪ್ರಸ್ತಾವಿಕವಾಗಿ ಮಾತನಾಡುತ್ತ,ಮಾನಸಿಕ ಅರೋಗ್ಯವು ಸಮಾಜಿಕ ಜೀವನದಲ್ಲಿ ಪ್ರಮುಖ ಪಾತ್ರವಿಸುತ್ತದೆ ಮತ್ತು ವಿದ್ಯಾರ್ಥಿಗಳ ತಮ್ಮ ಜೀವದ ಬೆಲೆಯನ್ನು ಯಾವುದೇ ಕಾರಣಕ್ಕು ಹಗುರವಾಗಿ ಪರಿಗಣಿಸಬಾರದು, ಕ್ಷಣ ಮಾತ್ರದ ಮಾನಸಿಕ ಅಸಮತೋಲನ ಜೀವಕ್ಕೆ ಬೆಲೆಕೊಡಲಾರದಷ್ಟು ನಷ್ಟ ಮಾಡುತ್ತದೆ ಮತ್ತು ಮಾದಕ ವ್ಯಸನವು ಜೀವನ ನಾಶ ಮಾಡತ್ತದೆ ಎಂದರು.

ಕಾಲೇಜಿನ ಐ.ಕ್ಯೂ.ಎ.ಸಿ ಸಂಚಾಲಕರಾದ ಶಶಿಧರ್ ರವರು ಈ ಕಾರ್ಯಕ್ರಮದ ಉದ್ದೇಶ ಮತ್ತು ಗುರಿಗಳನ್ನು ವಿವರಿಸಿದರು. ಹಿರಿಯ ಪ್ರಾಧ್ಯಾಪಕರಾದ ಸೈಯದ್ ಮಿನ್ಹಾಜ್ ಉಲ್ ಹಸ್ಸನ್ ವಿದ್ಯಾರ್ಥಿಗಳಿಗೆ ತಂದೆ–ತಾಯಿ, ಜೀವ ಮತ್ತು ಅದರ ಮೌಲ್ಯಗಳ ಕುರಿತು ಹೇಳಿದರು. ಇತಿಹಾಸ ವಿಭಾಗದ ಮುಖ್ಯಸ್ಥೆ ಶೋಭಾ, ಕನ್ನಡ ವಿಭಾಗದ ಚಂದ್ರ ಹಾಗೂ ಡಾ.ಚನ್ನಬಸವ ಮಾತನಾಡಿದರು.

ರಾಷ್ಟ್ರೀಯ ಕಾರ್ಯಪಡೆ(ಎನ್.ಟಿ.ಎಫ್) ಅಧಿಸೂಚನೆಯಿಂದ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳನ್ನುಒಗ್ಗೂಡಿಸಿ**(2ನೇಪುಟಕ್ಕೆ)**

## ನಟ ಕಿಚ್ಚ ಸುದೀಪ್ ಹುಟ್ಟುಹಬ್ಬದ ಅಂಗವಾಗಿ ನೋಟ್ ಬುಕ್ ವಿತರಣೆ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಸೆ.02–** ನಟ ಕಿಚ್ಚ ಸುದೀಪ್ ಅವರ 52 ನೇ ವರ್ಷದ ಹುಟ್ಟು ಹಬ್ಬದ ಅಂಗವಾಗಿ ತಾಲೂಕಿನ ಮುಸ್ಟೂರು ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಿಚ್ಚ ಅಭಿಮಾನಿಗಳ ಗೆಳೆಯರ ಬಳಗದಿಂದ ಸರಕಾರಿ ಶಾಲೆಯ ಮಕ್ಕಳಿಗೆ ನೋಟ್ ಬುಕ್ ವಿತರಣೆ ಮಾಡುವ ಮೂಲಕ ಹುಟ್ಟು ಹಬ್ಬ ಆಚರಿಸಿದರು.



ಈ ವೇಳೆ ಶಾಲೆಯ ಸಹ ಶಿಕ್ಷಕಿ ಝುರೀನಾ ಮಾತನಾಡಿ ಗ್ರಾಮದ ಗೆಳೆಯರ ಬಳಗದಿಂದ ನಟ ಕಿಚ್ಚಸುದೀಪ್ ಹುಟ್ಟು ಹಬ್ಬವನ್ನು ಶಾಲೆಯ ಮಕ್ಕಳಿಗೆ ನೋಟ್ ಬುಕ್ ವಿತರಣೆ ಮಾಡುವುದರ ಮೂಲಕ ಅರ್ಥಪೂರ್ಣ ಹುಟ್ಟು ಹಬ್ಬವನ್ನು ಆಚರಿಸಿದ್ದಾರೆ. ಸಂಭ್ರಮ ಸಡಗರದ ದುಂದುವೆಚ್ಚ ಮಾಡಿ ಆಚರಣೆ ಮಾಡುವ ಬದಲು ಈ ರೀತಿ ಸಾಮಾಜಿಕ ಕಾರ್ಯಗಳನ್ನು ಹಮ್ಮಿಕೊಳ್ಳುವುದರಿಂದ ಈಗಿನ ಯುವಕರಿಗೆ ಮಾದರಿಯಾಗಿದ್ದಾರೆ ಎಂದರು. ಈ ವೇಳೆ ಶಾಲೆಯ 200 ಕ್ಕೂ ಮಕ್ಕಳಿಗೆ ಸಿಹಿ ಹಂಚಿ ನೋಟ್ ಬುಕ್ , ಪೆನ್ಸ್ ವಿತರಣೆ ಮಾಡಿದರು.ಈ ಸಂದರ್ಭದಲ್ಲಿ ಕಿಚ್ಚ ಅಭಿಮಾನಿ ಬಳಗದ ಸಂಜೀವ್ ನಾಯಕ, ವೀರೇಶ ನಾಯಕ, ಲಕ್ಷ್ಮಣ ನಾಯಕ, ರಾಘವೇಂದ್ರ ನಾಯಕ, ಚಂದ್ರಶೇಖರ ನಾಯಕ ಶಾಲೆಯ ಶಿಕ್ಷಕರಾದ ಪಾರ್ವತಿ, ಕಾವೇರಿ, ಯಲ್ಲಮ್ಮ, ಶಾಂತಮ್ಮ, ಲಕ್ಷ್ಮಿ, ಶ್ರೀನಿವಾಸ ಹಾಗೂ ಶಾಲೆಯ ವಿದ್ಯಾರ್ಥಿಗಳು ಇದ್ದರು.

ಯುವ ಮಾರ್ಗ

ಬುಧವಾರ : 03–09–2025

## ಮೊದಲನೇಯ ಪುಟದಿಂದ

## ರೈತರಿಗೆ ಸಮರ್ಪಕ ಗೊಬ್ಬರ ವಿತರಣೆಗೆ ಕ್ರಮವಹಿಸಿ: ಶಾಸಕರಾದ ಬಸನಗೌಡ ದದ್ದಲ್ ಕಟ್ಟುನಿಟ್ಟಿನ ನಿರ್ದೇಶನ

**ನೀರಿಗೆ ತೊಂದರೆಯಾಗದಿರಲಿ:** ರಾಯಚೂರ ಗ್ರಾಮೀಣ ಕ್ಷೇತ್ರದ ಯಾವುದೇ ಗ್ರಾಮದಲ್ಲಿ ಕುಡಿವ ನೀರಿಗೆ ತೊಂದರೆಯಾಗಬಾರದು. ಮುಂದಿನ ದಿನಗಳಲ್ಲಿ ಅನುಕೂಲವಾಗುವಂತೆ ಕೆರೆ ತುಂಬಲು ಒತ್ತು ಕೊಡಬೇಕು. ತುಂಗಭದ್ರಾ ನದಿ ತುಂಬಿ ಹರಿಯುತ್ತಿದೆ. ಆದಾಗ್ಯು ನದಿ ತಟದ ಸುತ್ತಲಿನ ಗ್ರಾಮಸ್ಥರು ನಮಗೆ ನೀರು ಸಿಗುತ್ತಿಲ್ಲ ಎಂದು ದೂರಿದಲ್ಲಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗುವುದು ಎಂದು ಶಾಸಕರು ಎಚ್ಚರಿಕೆ ನೀಡಿದರು. ಪೈಪಲೈನ್ ಲಿಕೇಜ್ ಆಗುತ್ತಿದೆ, ನೀರು ಹೋಗುತ್ತಿಲ್ಲ ಎಂದು ಕುಂಟುನೆಪ ಹೇಳುತ್ತ ಕಾಲಹರಣ ಮಾಡದೇ ಕ್ರಿಯಾಯೋಜನೆಯಲ್ಲಿ ಸೇರಿಸಿ, ಅವಶ್ಯವಿರುವ ಕಡೆಗೆ ತಡಮಾಡದೆ ದುರಸ್ತಿ ಕಾರ್ಯ ಆರಂಭಿಸಬೇಕು ಎಂದು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಅಧಿಕಾರಿಗಳಿಗೆ ಮತ್ತು ಕೆಲ ಪಿಡಿಓಗಳಿಗೆ ಶಾಸಕರು ನಿರ್ದೇಶನ ನೀಡಿದರು.

ಜೆಸ್ಕಾಂ ಅಧಿಕಾರಿಗಳಿಗೆ ಸೂಚನೆ: ವಿದ್ಯುತ್ ಮೀಟರ್ ಇಲ್ಲ, ಬಿಲ್ ಕಟ್ಟಿಲ್ಲ ಎಂದು ಯಾವುದೇ ಹಳೆಯ ಮನೆಗಳು ಮತ್ತು ಸರ್ಕಾರಿ ಶಾಲೆ, ಅಂಗನವಾಡಿಗಳಿಗೆ ವಿದ್ಯುತ್ ಕಡಿತ ಮಾಡಕೂಡದು. ಬಿಲ್ ಕಟ್ಟಿಲ್ಲ ಎಂದು ಬೀದಿದೀಪಗಳನ್ನು ಆಫ್ ಮಾಡಬಾರದು ಎಂದು ಶಾಸಕರು ಜೆಸ್ಕಾಂ ಅಧಿಕಾರಿಗಳಿಗೆ ಸೂಚನೆ ನೀಡಿದರು. ಎಲ್ಲ ಶಾಲೆಗಳ ಹೆಡ್ ಮಾಸ್ಟರಗಳಿಂದ ಮೀಟರ್ ಇಲ್ಲದ ಶಾಲೆಗಳ ಪಟ್ಟಿ ಮಾಡಿ ಮೀಟರ್ ಅಳವಡಿಕೆಗೆ ಕ್ರಮ ವಹಿಸಬೇಕು ಎಂದು ಶಾಸಕರು ಬಿಇಓ ಅವರಿಗೆ ನಿರ್ದೇಶನ ನೀಡಿದರು.

ಶಾಲೆಗಳಿಗೆ ನಿಯಮಿತ ಭೇಟಿ ನಡೆಸಲು ಸೂಚನೆ: ಶಾಲಾ ಮಕ್ಕಳಿಗೆ ಸಮವಸ್ತ್ರ, ಶೂ ವಿತರಣೆ ಸಕಾಲಕ್ಕೆ ಆಗಬೇಕು. ಮಕ್ಕಳಿಗೆ ಗುಣಮಟ್ಟದ ಬಿಸಿ ಊಟದ ವ್ಯವಸ್ಥೆಯಾಗಬೇಕು. ಖಾಲಿ ಇರುವ ಅಡುಗೆ ಮೇಲ್ವಿಚಾರಕರು ಮತ್ತು ಅಡುಗೆದಾರರ ಹುದ್ದೆ ತುಂಬಬೇಕು. ಶಾಲೆಗಳಲ್ಲಿ ಆರಂಭವಾದ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳು ಸರಿಯಾಗಿ ನಡೆಯುವಂತೆ ಮೇಲ್ವಿಚಾರಣೆ ಮಾಡಬೇಕು. ಎಲ್ಲ ಶಾಲೆಗಳಿಗೆ ನಿಯಮಿತ ಭೇಟಿ ನೀಡಿ ಪರಿಶೀಲಿಸಬೇಕು ಎಂದು ಶಾಸಕರು, ಬಿಇಓ ಈರಣ್ಣ ಅವರಿಗೆ ನಿರ್ದೇಶನ ನೀಡಿದರು.

ಪಾಗಿಂಗ್ ಮಾಡಲು ಪಿಡಿಓಗಳಿಗೆ ಸೂಚನೆ: ಮಳೆಯಿಂದಾಗಿ ಅಲ್ಲಲ್ಲಿ ನೀರು ನಿಂತು ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ಆದ್ದರಿಂದ ರಾಯಚೂರ ತಾಲೂಕಿನ ಎಲ್ಲ ಗ್ರಾಮ ಪಂಚಾಯತಗಳಲ್ಲಿ ಅಲ್ಲಿನ ಪಿಡಿಓ ಗಳು ಕಡ್ಡಾಯ ಪಾಗಿಂಗ್ ಮಾಡಲು ಕ್ರಮವಹಿಸಿ ಜನರ ಆರೋಗ್ಯ ಕಾಪಾಡಬೇಕು ಎಂದು ಶಾಸಕರು ನಿರ್ದೇಶನ ನೀಡಿದರು.

ಅಕ್ರಮ ಮರಳು ಸಾಗಣೆ ನಿಲ್ಲಿಸಿ: ಅಕ್ರಮ ಮರಳು ಸಾಗಣೆ ನಡೆಯುತ್ತಿರುವುದು ಎಲ್ಲಾದರು ಕಂಡು ಬಂದಲ್ಲಿ, ಆ ಬಗ್ಗೆ ನಿಗಾವಹಿಸಿ ಅಕ್ರಮ ಮರಳು ಸಾಗಣೆ ತಡೆಯಬೇಕು ಎಂದು ಶಾಸಕರು, ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ರಾಯಚೂರ ಒಕ್ಕಲುತನ ಹುಟ್ಟುವಳಿ ಮಾರಾಟ ಮತ್ತು ಸಂಸ್ಕರಣ ಸಂಘದ ಅಧ್ಯಕ್ಷರಾದ ಜಯಂತರಾವ್ ಪತಂಗೆ, ಎಪಿಎಂಸಿ ಅಧ್ಯಕ್ಷರಾದ ಮಲ್ಲಿಕಾರ್ಜುನಗೌಡ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ತಾಲೂಕು ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ, ತಹಸೀಲ್ದಾರ ಸುರೇಶ ವರ್ಮಾ, ತಾಲೂಕು ಪಂಚಾಯತನ ಆಡಳಿತಾಧಿಕಾರಿಗಳಾದ ಶರಣಬಸವರಾಜ, ತಾಪಂ ಇಓ ಚಂದ್ರಶೇಖರ ಪವರ್, ತ್ರೈಮಾಸಿಕ ಕೆಡಿಪಿ ಸಭೆಯ ನಾಮ ನಿರ್ದೇಶಿತ ಸದಸ್ಯರಾದ ಫಾರುಕ್ ಹುಸೇನ್ ತಂದೆ ಅಬ್ದುಲ್ ಜಿಲಾನಿ, ಶ್ರೀಮತಿ ಪಲ್ಲವಿ ಗಂಡ ಸುರೇಶ, ಈರೇಶ ತಂದೆ ರಾಮಪ್ಪ, ಜಿಂದಪ್ಪ ಶಾವಣಿ ತಂದೆ ಹನುಮಯ್ಯ, ಶರಣಬಸವ ತಂದೆ ನಾಗಾರೆಡ್ಡಿ, ತಿಮ್ಮಪ್ಪ ನಾಯಕ ತಂದೆ ದೊಡ್ಡ ತಾಯಣ್ಣ, ರಾಯಚೂರು ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವ ವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಚನ್ನಬಸವ ಮತ್ತು ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

## ದುಡುಕಿನ ನಿರ್ಧಾರದಿಂದ ಜೀವನ ನಾಶ ಮಾಡಿಕೊಳ್ಳದಿರಲು ಸಲಹೆ

ಸಮಾಜದಲ್ಲಿ ಹೆಚ್ಚಾಗುತ್ತಿರುವ ಅತ್ಮಹತ್ಯೆ ಪ್ರಕಟಣೆಗಳು, ಮಾನಸಿಕ ಖಿನ್ನತೆಗೆ ಒಳಗಾಗುತ್ತಿರುವ ವಿದ್ಯಾರ್ಥಿಗಳು ಮತ್ತು ಇಂತಹ ಸಮಸ್ಯೆಯನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ಕಾಲೇಜಿನ ಬೋಧಕ ವರ್ಗದವರು ಆಪ್ತ ಸಮಾಲೋಚಕರಾಗಿ ಕಾರ್ಯನಿರ್ವಹಿಸುತ್ತೇವೆ ಎಂದು ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ತುಂಬಲಾಯಿತು.

ಈ ಕಾರ್ಯಕ್ರಮದಲ್ಲಿ ವಾಣಿಜ್ಯಶಾಸ್ತ್ರ ವಿಭಾಗ ಮುಖ್ಯಸ್ಥರಾದ ಸುಧಾ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಹರ್ಷಿತಾ ಮತ್ತು ಕಾಲೇಜಿನ ಎನ್.ಸಿ.ಸಿ. ಸಂಚಾಲಕರು ಮತ್ತು ಗಣಿತಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾದ ಉಸ್ಮಾನ್ ಬಾಷಾ ಉಪಸ್ಥಿತರಿದ್ದರು.

## ದೆಹಲಿ, ಸೇರಿ ಉತ್ತರ ಭಾರತದಲ್ಲಿ ಮಳೆಯಬ್ಬರ, ಜನಜೀವನ ಅಸ್ತವ್ಯಸ್ತ

ಯಮುನಾ ನದಿ ಅಪಾಯ ಮಟ್ಟ ಮೀರಿ ಹರಿಯುತ್ತಿದ್ದು, ನದಿಯ ನೀರಿನ ಮಟ್ಟವು ನಿರಂತರವಾಗಿ ಹೆಚ್ಚಾಗುತ್ತಿದೆ. ಪರಿಣಾಮ ತಗ್ಗು ಪ್ರದೇಶದಲ್ಲಿರುವ ಜನರು ಪ್ರವಾಹದ ಭೀತಿಗೊಳಗಾಗಿದ್ದಾರೆ.

ಬೆಳಿಗ್ಗೆ ಯಮುನಾ ನದಿಯ ನೀರಿನ ಮಟ್ಟ 205.75 ಮೀಟರ್‌ಗೆ ಏರಿದ್ದು, ಅಪಾಯದ ಮಟ್ಟ (205.33)ವನ್ನು ದಾಟಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನದಿಯಲ್ಲಿ ನೀರಿನ ಮಟ್ಟ ಏರುತ್ತಿರುವುದರಿಂದ ತಗ್ಗು ಪ್ರದೇಶಗಳಲ್ಲಿ ಪ್ರವಾಹದ ಅಪಾಯ ಹೆಚ್ಚಾಗಿದೆ.

ಸರ್ಕಾರ ಪರಿಸ್ಥಿತಿಯನ್ನು ನಿಭಾಯಿಸಲು ಸಂಪೂರ್ಣವಾಗಿ ಸಿದ್ಧವಾಗಿದೆ ಎಂದು ದೆಹಲಿ ಮುಖ್ಯಮಂತ್ರಿ ರೇಖಾಗುಪ್ತಾ ಹೇಳಿದ್ದಾರೆ.

ಹಥ್ನಿ ಕುಂಡ್ ಬ್ಯಾರೇಜ್‌ನಿಂದ 2.07 ಲಕ್ಷ ಕ್ಯೂಸೆಕ್, ವಜೀರಾಬಾದ್ ಬ್ಯಾರೇಜ್‌ನಿಂದ 67,260 ಕ್ಯೂಸೆಕ್ ಮತ್ತು ಓಖ್ಲಾ ಬ್ಯಾರೇಜ್‌ನಿಂದ 61,958 ಕ್ಯೂಸೆಕ್ ನೀರನ್ನು ಬಿಡುಗಡೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಬೆಳಿಗ್ಗೆ 7 ಗಂಟೆಗೆ ನೀರಿನ ಮಟ್ಟ 205.75 ಮೀಟರ್‌ಗೆ ಏರಿದ್ದು, ಮೂರು ಬ್ಯಾರೇಜ್‌ಗಳಿಂದ ಹೆಚ್ಚಿನ ನೀರು ಹೊರಬಿಡಲಾಗಿದೆ. ಹರಿಯಾಣದಿಂದ ಹೆಚ್ಚಿನ ನೀರು ಬಿಡುಗಡೆಯಾಗಿದ್ದು, ದೆಹಲಿಯಲ್ಲಿ ಪ್ರವಾಹದ ಭೀತಿ ಹೆಚ್ಚಾಗಿದೆ. ಅಧಿಕಾರಿಗಳು ಕಟ್ಟೆಚ್ಚರ ವಹಿಸಿದ್ದಾರೆಂದು ತಿಳಿಸಿದರು.

ಯಮುನಾ ನದಿಯ ನೀರಿನ ಮಟ್ಟ ಸ್ಥಿರವಾಗಿ ಏರುತ್ತಿರುವುದರಿಂದ ಮತ್ತು ಇಂದು ಸಂಜೆಯ ವೇಳೆಗೆ ನೀರಿನ ಸ್ಥಳಾಂತರದ ಮಟ್ಟ 206 ಮೀಟರ್ ತಲುಪುವ ನಿರೀಕ್ಷೆಯಿರುವುದರಿಂದ ಯಮುನಾ ನದಿ ತೀರದಲ್ಲಿ ವಾಸಿಸುವ ಜನರು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಗೊಳ್ಳುವಂತೆ ಸೂಚನೆ ನೀಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ರಸ್ತೆಯಲ್ಲೇ ನಿಂತ ವಾಹನ ಸವಾರರು!

ಗುರುಗ್ರಾಮ್‌ನಲ್ಲಿ ಸುರಿದ ಭಾರೀ ಮಳೆಯಿಂದಾಗಿ ದೆಹಲಿ–ಜೈಪುರ ಹೆದ್ದಾರಿಯಲ್ಲಿ 7 ಕಿಲೋಮೀಟರ್‌ಗಳಷ್ಟು ದೂರ ಸಂಚಾರ ದಟ್ಟಣೆ ಉಂಟಾಗಿದ್ದು ವಾಹನ ಸವಾರರು ಸುಮಾರು ಮೂರೂ ಗಂಟೆಗು ಹೆಚ್ಚಿನ ಕಾಲ ಹೆದ್ದಾರಿಯಲ್ಲೇ ಸಿಲುಕಿಕೊಂಡಿರುವ ಘಟನೆ ಮಂಗಳವಾರವೂ ನಡೆದಿದೆ.

ದೆಹಲಿ–ಜೈಪುರ ಹೆದ್ದಾರಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ನಿಂತ ಪರಿಣಾಮ ಹೆಚ್ಚಿನ ವಾಹನಗಳು ಕೆಟ್ಟು ಹೆದ್ದಾರಿಯಲ್ಲೇ ನಿಂತ ಪರಿಣಾಮ ಸುಮಾರು ಏಳರಿಂದ ಎಂಟು ಕಿಲೋಮೀಟರ್ ದೂರದವರೆಗೆ ವಾಹನಗಳು ಸಾಲುಗಟ್ಟಿ ನಿಂತಿರುವುದು ಕಂಡುಬಂದಿದೆ. ಕಚೇರಿಯಿಂದ ಮನೆಗೆ ಹೊರಟಿದ್ದ ಅದೆಷ್ಟೋ ಮಂದಿ ಹೆದ್ದಾರಿಯಲ್ಲೇ ಸಿಲುಕಿಕೊಂಡು ಪರದಾಡುವಂತಾಗಿದೆ.

## ಕಲ್ಯಾಣ ಕರ್ನಾಟಕದ ಮಲತಾಯಿ ಧೋರಣೆ ಸರಿಯಲ್ಲ

**ಬಳ್ಳಾರಿ, ಸೆ.02–** ಕರ್ನಾಟಕದ ಏಕೀರಕರಣಗೊಂಡು 69 ವರ್ಷ ಆದರೂ ಕಲ್ಯಾಣ ಕರ್ನಾಟಕಕ್ಕೆ ಮಲತಾಯಿ ಧೋರಣೆ ನಿಂತಿಲ್ಲ. ಶಿಕ್ಷಣ ಕ್ಷೇತ್ರ, ನೀರಾವರಿ, ವಿದ್ಯುತ್, ಕೃಷಿ, ಸಾರಿಗೆ, ರಸ್ತೆ ಅಭಿವೃದ್ಧಿ, ಉದ್ಯೋಗ, ಆರೋಗ್ಯ ಕ್ಷೇತ್ರದ ಅಭಿವೃದ್ಧಿ ನಿರ್ಲಕ್ಷ ಧೋರಣೆ ಬಿಡಬೇಕು ಎಂದು ಕನ್ನಡ ನಾಡು ರೈತ ಸಂಘ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದೆ.ಸಂಘದ ಅಧ್ಯಕ್ಷ ಮೆಣಸಿನ ಈಶ್ವರಪ್ಪ ಮತ್ತವರ ಕಾರ್ಯಕರ್ತರು. ಕಲ್ಯಾಣ ಕರ್ನಾಟಕದ ರಾಜ್ಯದಲ್ಲಿನ ಬಳ್ಳಾರಿ ಸೇರಿದಂತೆ ಏಳು ಜಿಲ್ಲೆಗಳುಶಿಕ್ಷಣ ಕ್ಷೇತ್ರದಲ್ಲಿ ತುಂಬಾ ಹಿಂದೆ ಉಳಿದಿದೆ 63.71% ಸಾಕ್ಷಾರತ ಹೊಂದಿವೆ. ನಮ್ಮ ಶಾಲಾ ಕಾಲೇಜ್ ಗಳು, ಕಟ್ಟಡಗಳು, ಶೀತಲ ವ್ಯವಸ್ಥೆ ತಲುಪಿವೆ. ಕೆಲವು ಹಳ್ಳಿಗಳಲ್ಲಿ ಕಟ್ಟಡಗಳು ಇಲ್ಲ. ಶಾಲೆಗಳಲ್ಲಿ ಶಿಕ್ಷಕರ ಕೊರತೆ, ಕಾಲೇಜ್ಗಳಲ್ಲಿ ಪ್ರಾಧ್ಯಾಪಕರ ಕೊರತೆ ಇದೆ.

ಈ ಭಾಗದ ಕಾಲುವೆಗಳಿಗೆ ನೀರಿಗಿಂತ ಹಣವೆ ಹೆಚ್ಚು ಹರಿದಿದೆ. ಇಂದಿಗೂ ನಮ್ಮ ಕಾಲುವೆಗಳಿಗೆ ಸಮರ್ಪಕವಾಗಿ ನೀರು ಹರಿಯುವುದಿಲ್ಲ ಇಂದಿಗೂ ಹಲವು ಹಳ್ಳಿಗಳಲ್ಲಿ ನೀರಿನ ಬರ ಇದೆ.ನಮ್ಮ ಕಲ್ಯಾಣ ಕರ್ನಾಟಕದ ಬೀದರ್ ನಲ್ಲಿ ಬೆಂಗಳೂರಿನ ಹವಾಗುಣ ಇದ್ದರು ಬಿದರ್ನಿಂದ ಹೈದ್ರಾಬಾದ್ಗೆ 145 ಕಿಲೋ ಮೀಟರ್ ರಾಜೀವ್ ಗಾಂಧಿ ಇಂಟರ್ ನ್ಯಾಷನಲ್ ಏರ್ಪೋರ್ಟ್ ಇದ್ದರು ಐಟಿ.ಬಿಟಿ ಕಂಪನಿಗಳನ್ನು ಸ್ಥಾಪಿಸಲು ಮುಂದಾಗಿಲ್ಲ.ಬಳ್ಳಾರಿಯಲ್ಲಿ ರೈತರಿಂದ ಭೂಮಿ ವಶಪಡಿಸಿಕೊಂಡಿದ್ದರು ಏರ್ಪೋರ್ಟ್ ಸ್ಥಾಪನೆ ಮಾತ್ರ ಆಗುತ್ತಿಲ್ಲ.ನಮ್ಮ ಕಲ್ಯಾಣ ಕರ್ನಾಟಕದ ಎಂ.ಎಲ್.ಎ, ಎಂ.ಎಲ್.ಸಿ, ಮಂತ್ರಿಗಳು ಪಕ್ಷಬೇದ ಮರೆತು ಈ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರದಲ್ಲಿ ಹೋರಾಟ ಮಾಡಬೇಕು ಎಂದು ಮನವಿ ಮಾಡಿದ್ದಾರೆ

## ನೇಣು ಹಾಕಿಕೊಂಡು ವ್ಯಕ್ತಿ ಆತ್ಮಹತ್ಯೆ

**ಕಲಬುರಗಿ,ಸೆ.02–**ನೇಣು ಹಾಕಿಕೊಂಡು ವ್ಯಕ್ತಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಮೊಮಿನಪೂರದಲ್ಲಿ ನಡೆದಿದೆ.

ಪಶ್ಚಿಮ ಬಂಗಾಳ ಮೂಲದ ಮಹಮ್ಮದ್ ಶೇಖ್ ಒಸ್ಮಾನ್ ತಂದೆ ಶೇಖ್ ಜುಲ್ಫಿಕರ್ ಆತ್ಮಹತ್ಯೆ ಮಾಡಿಕೊಂಡವರು.

ಮೃತ ಮಹಮ್ಮದ್ ಶೇಖ್ ಒಸ್ಮಾನ್, ಸರಾಫ್ ಬಜಾಜ್‌ದಲ್ಲಿರುವ ಶೇಖ್ ರಬೀವುಲ್ ಅವರ ಬಂಗಾರದ ಅಂಗಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಸೊನಾರ ಕೆಲಸ ಮಾಡುತ್ತಿದ್ದ ಮತ್ತು ಅವರ ಮನೆಯಲ್ಲಿಯೇ ವಾಸಿಸುತ್ತಿದ್ದು, ಮನೆಯ ಹಾಲ್‌ನಲ್ಲಿರುವ ಛತ್ತಿನ ಕೊಂಡಿಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ತಿಳಿದುಬಂದಿದೆ. ಈ ಸಂಬಂಧ ಶೇಖ್ ರಬೀವುಲ್ ಅವರು ಚೌಕ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ತನಿಖೆ ನಡೆದಿದೆ.

## ಬಸವರಾಜಯ್ಯ ಸ್ವಾಮಿಗುರುಮಠ ನಿಧನ



**ಅರಕೇರಾ,ಸೆ.02–**ತಾಲೂಕಿನ ರೇಕಲಮರಡಿಗ್ರಾಮದ ಬಸವರಾಜಯ್ಯ ಸಾಮಿ ಗುರುಮಠ (95) ವಯೋ ಸಹಜ ಮಂಗಳವಾರ ನಿಧನರಾದರು.

ಮೂವರು ಪುತ್ರರು, ನಾಲ್ವರು ಪುತ್ರಿಯರು, ಸೊಸೆಯಂದಿರು ಸೇರಿದಂತೆಅಪಾರ ಬಂಧು ವರ್ಗವನ್ನು ಅಗಲಿದ್ದಾರೆ.ಮೃತರ ಅಂತ್ಯಕ್ರಿಯೆ ಸ್ವಗ್ರಾಮ ರೇಕಲಮರಡಿಯಲ್ಲಿ ಮಂಗಳವಾರ ಸಂಜೆ ನೆರವೇರಿತು.

## ಇಂದು ಬೀದರ್‌ನಲ್ಲಿ ಬಸವ ಸಂಸ್ಕೃತಿ ಅಭಿಯಾನ: ಬಸವರಾಜ ಧನ್ನೂರ್




**ಬೀದರ್,ಸೆ.02–** ಇಂದು ಬೀದರ್‌ನಲ್ಲಿ ಲಿಂಗಾಯತ ಮಠಾಧಿಪತಿಗಳ ಒಕ್ಕೂಟ, ಬಸವಪರ ಸಂಘಟನೆಗಳು ಹಾಗೂ ಬಸವ ಸಂಸ್ಕೃತಿ ಅಭಿಯಾನ ಸಮಿತಿಗಳ ಸಹಯೋಗದಲ್ಲಿ ಬಸವ ಸಂಸ್ಕೃತಿ ಅಭಿಯಾನ ಆಯೋಜಿಸಲಾಗಿದೆ ಎಂದು ಬ ಸವ ಸಂಸ್ಕೃತಿ ಅಭಿಯಾನ ಸಮಿತಿ ಅಧ್ಯಕ್ಷ ಬಸವರಾಜ ಧನ್ನೂರ ತಿಳಿಸಿದರು.

ಸೋಮವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾ ಗೋಷ್ಟಿ ಉದ್ದೇಶಿಸಿ ಮಾತನಾಡಿರುವ ಅವರು, ಸೆ.1 ಸೋಮವಾರ ಬಸವಣ್ಣನವರ ಜನ್ಮಭೂಮಿ ಬಸವನ ಬಾಗೇವಾಡಿಯಲ್ಲಿ ಬಸವ ಸಂಸ್ಕೃತಿ ಅಭಿಯಾನ ಉದ್ಘಾಟನೆಗೊಂಡು ನಾಡಿನ ಎಲ್ಲ ಜಿಲ್ಲೆಗಳಲ್ಲಿ ಈ ಅಭಿಯಾನ ಜರುಗಲಿದೆ. ಆಕ್ಟೊಬರ್ 5ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಅಭಿಯಾನದ ಸಮಾರೋಪ ಸಮಾರಂಭ ಜರುಗಲಿದೆ. ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವ ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಸಮಾರೋಪ ಭಾಷಣ ಮಾಡುವರು. ಇಂದು ಕಲಬುರಗಿಯಲ್ಲಿ ಬಸವ ಸಂಸ್ಕೃತಿ ಅಭಿಯಾನ ಜರುಗಲಿದ್ದು, ನಾಳೆ ಅಂದರೆ ಸಪ್ಟೆಂಬರ್ 3ರಂದು ಬಸವಣ್ಣನವರ ಭಾವಚಿತ್ರವಿರುವ ಬಸವ ರಥ ಬೀದರ್‌ಗೆ ಬಂದು ಬಸವ ಸಂಸ್ಕೃತಿ ಅಭಿಯಾನದ ಮೆರವಣಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದೆ ಎಂದು ತಿಳಿಸಿದರು.

ಬೆಳಗ್ಗೆ 11 ಗಂಟೆಗೆ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ಕಾಲೇಜು ವಿದ್ಯಾರ್ಥಿಗಳ ಮತ್ತು ಸಾರ್ವಜನಿಕರ ಜೊತೆ ವಚನ ಸಂವಾದ ಕಾರ್ಯಕ್ರಮ ಜರುಗಲಿದ್ದು, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಕಾರ್ಯಕ್ರಮ ಉದ್ಘಾಟಿಸುವರು. ಸಂಜೆ 4 ಗಂಟೆಗೆ ಮೆರವಣಿಗೆ ಜರುಗಲಿದ್ದು, ನಗರದ ಬಸವೇಶ್ವರ ವೃತ್ತದಿಂದ ಬಿ.ವಿ. ಭೂಮರೆಡ್ಡಿ ಕಾಲೇಜಿನ ವರೆಗೆ ಜರುಗಲಿದೆ. ಈಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಮೆರವಣಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ನಾಡಿನ ಸುಮಾರು 100ಕ್ಕೂ ಅಧಿಕ ಮಠಾಧಿಶರು ಮೆರವಣಿಗೆಯಲ್ಲಿ ಭಾಗವಹಿಸುವರು. 2000 ಶರಣೆಯರು ಇಳಕಲ್ಲ ಸೀರೆ ಧರಿಸಿ ಹಾಗೂ 2000 ಶರಣರು ಧೋತರ ಧರಿಸಿ ಮೆರವಣಿಗೆಯ ಶೋಭೆ ಹೆಚ್ಚಿಸಲಿದ್ದಾರೆ. 4ರಿಂದ 8 ವರ್ಷದ ಮಕ್ಕಳು ಬಾಲ ಶರಣರ ವೇಷದಲ್ಲಿ ಅಕರ್ಷಿಸಲ್ಪಡುವರು. ಅದರಲ್ಲಿ ಮೂವರಿಗೆ ಪ್ರಥಮ, ದ್ವಿತೀಯ ಹಾಗೂ ತೃತಿಯ ಬಹುಮಾನ ವಿತರಿಸಲಾಗುವುದು. 24 ಕುದುರೆಗಳ ಮೇಲೆ ಲಿಂಗಾನಂದ ಮಹಾಸ್ವಾಮಿಗಳು, ಮಾತಾಜಿಯವರು, ಸರ್ ಎಂ ವಿಶ್ವೇಶ್ವರಯ್ಯ, ಫ.ಗು ಹಳಕಟ್ಟಿ, ಸಿದ್ದೇಶ್ವರ ಸ್ವಾಮಿಗಳು ಸೇರಿದಂತೆ ಅನೇಕ ಮಹಾತ್ಮರ ವೇಷಧಾ ರಿಗಳು ಕುದುರೆಯನ್ನೇರಿ ಗಮನ ಸೆಳೆಯುವರು. ಈಗಾಗಲೇ ವಚನ ಕಂಠಪಾಠ ಸ್ಪರ್ಧೆ, ನಿಭಂದ ಸ್ಪರ್ಧೆ, ಭಾಷಣ ಸ್ಪರ್ಧೆ, ರಂಗೋಲಿ ಸ್ಪರ್ಧೆ, ಚಿತ್ರಕಲೆ ಸ್ಪರ್ಧೆ ಜರುಗಿವೆ.

ಸಂಜೆ 6 ಗಂಟೆಗೆ ನಗರದ ಬಿ.ವಿ ಭೂಮರಡ್ಡಿ ಮಹಾವಿದ್ಯಾಲಯದ ಅವರಣದಲ್ಲಿ ಸಾರ್ವಜನಿಕ ಸಮಾರಂಭ ಜರುಗುವುದು. ರಾತ್ರಿ 8.30 ಗಂಟೆಗೆ ಶಿವಸಂಚಾರ ಸಾಣೆಹಳ್ಳಿ ತಂಡದವರಿಂದ 'ಜಂಗಮದೆಡೆಗೆ' ನಾಟಕ ಪ್ರದರ್ಶನ ಜರುಗುವುದು. ಕಾರ್ಯಕ್ರಮದ ನಂತರ ಪ್ರಸಾದದ ವ್ಯವಸ್ಥೆ ಇರುತ್ತದೆ

ಈ ಅಭಿಯಾನದಲ್ಲಿ ಬಸವಾದಿ ಶರಣರ ಭಿತ್ತಿ ಚಿತ್ರಗಳಿರುವ 'ಬಸವ' ರಥದ ಮೆರವಣಿಗೆ, ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳ ಜೊತೆ ಸಂವಾದ, ಪಾದಯಾತ್ರೆ, ಬಹಿರಂಗ ಸಭೆ, ವಚನ ಸಂಗೀತ, ಉಪನ್ಯಾಸ, ನಾಟಕ ಪ್ರದರ್ಶನ ಇತ್ಯಾದಿ ಚಟುವಟಿಕೆಗಳಿರುತ್ತವೆ.

ಜಾಗತಿಕ ಲಿಂಗಾಯತ ಮಹಾಸಭಾ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ರಾಷ್ಟ್ರೀಯ ಬಸವದಳ, ಭಾರತೀಯ ಬಸವ ಬಳಗ, ಬಸವ ಸಮಿತಿ, ಬಸವ ಕೇಂದ್ರ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಬಸವ ಸೇವಾ ಪ್ರತಿಷ್ಠಾನ, ಲಿಂಗಾಯತ ಮಹಾಮಠ, ಬಸವಪರ ಸಂಘಟನೆಗಳು, ಕನ್ನಡ ಸಾಹಿತ್ಯ ಪರಿಷತ್ತು, ವಚನ ಸಾಹಿತ್ಯ ಪರಿಷತ್ತು, ಕರ್ನಾಟಕ ಜಾನಪದ ಪರಿಷತ್ತು, ಕ.ಕ.ಕಲಾವಿದರ ಒಕ್ಕೂಟ, ಸರ್ವ ಶರಣ ಸಮಾಜದ ಸಂಘ ಸಂಸ್ಥೆಗಳು, ನೀಲಮ್ಮನ ಬಳಗಗಳು, ಮಹಿಳಾ ಸಂಘಟನೆಗಳು, ಬಸವತತ ಪ್ರೇಮಿಗಳು, ಸರ್ವ ಶರಣ ಬಂಧುಗಳು, ಪ್ರಗತಿಪರರು ಯುವಕ–ಯುವತಿಯರು ಸುಮಾರು 50 ಸಾವಿರಕ್ಕೂ ಅಧಿಕ ಜನರು ಇದರಲ್ಲಿ ಭಾಗವಹಿಸುವರು ಎಂದು ಧನ್ನೂರ್ ಹೇಳಿದರು.

## ಸೆ.10 ರಂದು ತಹಸೀಲ್ ಚಲೋ ಹೋರಾಟ



**ಭಾಲ್ಕಿ ಸೆ.02–** ತಾಲೂಕಿನಲ್ಲಿ ಮಳೆಯಿಂದ ಹಾನಿಗೀಡಾದ ಸಂತ್ರಸ್ತರಿಗೆ ಸೂಕ್ತ ಪರಿಹಾರ ನೀಡುವಂತೆ ಸೆ.10 ರಂದು ತಹಸೀಲ್ ಕಚೇರಿ ಚಲೋ ಹೋರಾಟ ನಡೆಸಿ ಸರಕಾರವನ್ನು ಒತ್ತಾಯಿಸಲಾಗುವುದು ಎಂದು ನಾರಂಜಾ ಸಹಕಾರ ಸಕ್ಕರೆ ಕಾರಖಾನೆ ಅಧ್ಯಕ್ಷ ಡಿ.ಕೆ.ಸಿದ್ರಾಮ ಹೇಳಿದರು.

ತಾಲೂಕಿನ ಆನಂದವಾಡಿ, ನಿಡೇಬಾನ್, ಇಂಚೂರು, ಕೊಂಗಳಿ, ಸಾಯಿಗಾಂವ ಸೇರಿ ಮುಂತಾದ ಕಡೆಗಳಿಗೆ ಸೋಮವಾರ ಭೇಟಿ ನೀಡಿ ರೈತರು, ಸಂತ್ರಸ್ತರಿಂದ ಮಳೆಹಾನಿ ಬಗ್ಗೆ ಮಾಹಿತಿ ಪಡೆದು ಕೊಂಡರು.

ತಾಲೂಕಿನಲ್ಲಿ ವಾಡಿಕೆಯಿಂದ ಹೆಚ್ಚು ಮಳೆ ಆಗಿರುವುದರಿಂದ ಮುಂಗಾರಿನಲ್ಲಿ ರೈತರು ಬೆಳೆದ ಹೆಸರು, ಉದ್ದು, ಸೋಯಾ ಅವರೆ, ತೊಗರಿ ಸೇರಿ ಕಬ್ಬು, ತರಕಾರಿ ಬೆಳೆಗಳು ನೀರು ಪಾಲಾಗಿ ರೈತರು ಆರ್ಥಿಕವಾಗಿ ಸಂಕಷ್ಟ ಎದುರಿಸುತ್ತಿದ್ದಾರೆ.

ಸಾವಿರಾರೂ ಎಕರೆ ಬೆಳೆಹಾನಿ ಆಗಿದೆ. ನೂರಾರು ಮನೆಗಳು ಕುಸಿತ ಕಂಡಿವೆ. ರಸ್ತೆ, ಸೇತುವೆಗಳು ಮುಳಗಡೆಯಾಗಿವೆ. ಹಲವೆಡೆ ವಿದ್ಯುತ್ ಕಂಬ ಬಿದ್ದು ವಿದ್ಯುತ್ ವ್ಯತ್ಯಯಾಗಿ ಜನರು ಸಂಕಷ್ಟ ಎದುರಿಸಿದ್ದಾರೆ.

ಬೆಳೆಹಾನಿ ಸಂಭವಿಸಿದ ರೈತರಿಗೆ ಸೂಕ್ತ ಪರಿಹಾರ, ಬೆಳೆವಿಮೆ ಪರಿಹಾರ ಸೇರಿ ಕಾರಂಜಾ ಜಲಾಶಯದ ಹೆಚ್ಚುವರಿ ನೀರಿನಿಂದ ಪ್ರತಿಬಾರಿ ಮುಳಗಡೆ ಕಾಣುತ್ತಿರುವ ದಾಡಗಿ, ಇಂಚೂರು ಮತ್ತು ಕೊಂಗಳಿ ಸೇತುವೆಗೆ ತಡೆಗೋಡೆ ನಿರ್ಮಾಣ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಲಾಗುವುದು

# ಬಿಜೆಪಿ ಹೋರಾಟಕ್ಕೂ ಫಂಡಿಂಗ್

**ಬೆಂಗಳೂರು, ಸೆ. 2–** ಧರ್ಮಸ್ಥಳ ಪ್ರಕರಣದಲ್ಲಿ ವಿದೇಶದಿಂದ ಹಣ ಬಂದಿದೆ ಎಂಬ ಬಿಜೆಪಿ ಹೇಳಿಕೆಗೆ ತಿರುಗೇಟು ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಿಜೆಪಿಗೆ ಹಣ ಬಂದಿದೆ. ಇಲ್ಲದಿದ್ದರೆ ಇಷ್ಟೆಲ್ಲಾ ಹೋರಾಟ, ಯಾತ್ರೆ ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿ ನಡೆಸಿದ ಧರ್ಮಸ್ಥಳ ಚಲೋ ರಾಜಕೀಯ ಯಾತ್ರೆ ಎಂದು ಬಣ್ಣಿಸಿದ ಅವರು, ಬಿಜೆಪಿಯವರು ಒಂದು ಕಡೆ ವೀರೇಂದ್ರ ಹೆಗಡೆಯವರಿಗೆ ಜೈಕಾರ ಹಾಕುತ್ತಾರೆ. ಮತ್ತೊಂದು ಕಡೆ ಸೌಜನ್ಯ ಪ್ರಕರಣವನ್ನು ಇಟ್ಟುಕೊಂಡು ವೀರೇಂದ್ರ ಹೆಗಡೆ ವಿರುದ್ಧ ಎತ್ತಿಕಟ್ಟುವ ಪ್ರಯತ್ನ ನಡೆಸುತ್ತಾರೆ. ಇವರು ಯಾರ ಪರ ಎಂಬುದನ್ನು ಸ್ಪಷ್ಟಪಡಿಸಲಿ ಎಂದು ಒತ್ತಾಯಿಸಿದ್ದಾರೆ.



ಮೈಸೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಧರ್ಮಸ್ಥಳ ಪ್ರಕರಣ ಇಟ್ಟುಕೊಂಡು ಬಿಜೆಪಿ ನಡೆಸಿರುವ ರಾಜಕಾರಣದ ವಿರುದ್ಧ ವಾಗ್ದಾಳಿ ನಡೆಸಿ, ಬಿಜೆಪಿಯವರು ಧರ್ಮಸ್ಥಳದಲ್ಲಿ ಹೆಣ ಸಿಗದ ನಂತರ ಮಾತನಾಡಲು ಆರಂಭಿಸಿದ್ದಾರೆ. ಧರ್ಮಸ್ಥಳ ಪ್ರಕರಣ ಬಹಿರಂಗವಾದಾಗಲೇ ಮಾತನಾಡಬೇಕಿತ್ತು. ಆಗ ಏಕೆ ಇವರು ಯಾತ್ರೆ ಮಾಡಲಿಲ್ಲ. ಸ್ವತಃ ವೀರೇಂದ್ರ ಹೆಗಡೆಯವರೇ ಎಸ್‌ಐಟಿ ತನಿಖೆಯನ್ನು ಸ್ವಾಗತ ಮಾಡಿದ್ದಾರೆ. ಸತ್ಯ ಹೊರಗೆ ಬರಬೇಕು ಎಂದು ಅವರೇ ಹೇಳಿದ್ದಾರೆ. ಹೀಗಿದ್ದರೂ ಬಿಜೆಪಿಯವರು ಏನೇನೋ ಮಾತನಾಡುತ್ತಿದ್ದಾರೆ. ಅವರದು ರಾಜಕೀಯ ಬಿಟ್ಟರೆ ಬೇರೇನೂ ಇಲ್ಲ ಎಂದರು.

ಧರ್ಮಸ್ಥಳ ಪ್ರಕರಣದಲ್ಲಿ ರಾಜ್ಯ ಸರ್ಕಾರ ಹಸ್ತಕ್ಷೇಪ ಮಾಡುತ್ತಿಲ್ಲ. ವಿದೇಶಿ ಫಂಡಿಂಗ್ ಬಗ್ಗೆ ಮಾತನಾಡುವ ಬಿಜೆಪಿಯವರಿಗೆ ಹೋರಾಟ ಮಾಡಲು ದುಡ್ಡು ಬಂದಿದೆ ಎಂದು ಅವರು ಗಂಭೀರ ಆರೋಪ ಮಾಡಿದರು.

ಒಂದು ಕಡೆ ಧರ್ಮಸ್ಥಳ ಪರ ಎನ್ನುವ ಬಿಜೆಪಿಯವರು, ಮತ್ತೊಂದು ಕಡೆ ಸೌಜನ್ಯ ಪ್ರಕರಣದ ಆರೋಪಿಯಾಗಿರುವ ವೀರೇಂದ್ರ ಹೆಗಡೆ ಕುಟುಂಬದ ವಿರುದ್ಧವೇ ಎತ್ತಿಕಟ್ಟುವ ಕೆಲಸ ಮಾಡುತ್ತಿದ್ದಾರೆ. ಇವರು ಯಾರ ಪರ ಎಂದು ಹರಿಹಾಯ್ದರು.

ಸೌಜನ್ಯ ಪ್ರಕರಣದ ಬಗ್ಗೆ ಸಿಬಿಐ ತನಿಖೆ ನಡೆಸಿದೆ. ಸಿಬಿಐ ಯಾರ ಕೈಕೆಳಗೆ ಇದೆ. ಸಿಬಿಐ ತನಿಖೆ ಏನಾಗಿದೆ, ಈ ಎಲ್ಲಾ ಸತ್ಯವನ್ನು ಬಿಜೆಪಿಯವರು ತಿಳಿದುಕೊಂಡು ಮಾತನಾಡಲಿ ಎಂದರು.

ಸೌಜನ್ಯ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುವುದು ಸೌಜನ್ಯ ಕುಟುಂಬಕ್ಕೆ ಬಿಟ್ಟದ್ದು ಎಂದು ಅವರು ಹೇಳಿದರು.

ಸೌಜನ್ಯ ಪ್ರಕರಣದ ಸಂಬಂಧ ನಿನ್ನೆ ಮಹಿಳೆಯೊಬ್ಬರು ಸೌಜನ್ಯ ಅಪಹರಿಸಿದ್ದನ್ನು ನಾನು ನೋಡಿದ್ದೇನೆ ಎಂದು ಎಸ್‌ಐಟಿಗೆ ದೂರು ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಆ ಮಹಿಳೆ ಈ ಹಿಂದೆ ನ್ಯಾಯಾಲಯ ಮತ್ತು ಸಿಬಿಐ ಮುಂದೆ ಇದನ್ನು ಏಕೆ ಹೇಳಲಿಲ್ಲ. ಸಾಕ್ಷ್ಯ ಗೊತ್ತಿದ್ದು ಮುಚ್ಚಿಡುವುದು ಅಪರಾಧವಲ್ಲವೇ, ಸಿಬಿಐ ತನಿಖೆಗೆ ಸೌಜನ್ಯ ಪ್ರಕರಣವನ್ನು ಕೊಟ್ಟಿದ್ದೇವೆ. ಸಿಬಿಐನವರೇ ಎಲ್ಲವನ್ನು ತನಿಖೆ ಮಾಡಿದ್ದಾರೆ ಎಂದರು.

ವಿಧಾನಸಭೆಯಲ್ಲೂ ಧರ್ಮಸ್ಥಳ ಪ್ರಕರಣದ ಚರ್ಚೆಯಾಗಿತ್ತು. ಆಗ ಆರ್. ಅಶೋಕ್, ಸುನೀಲ್‌ಕುಮಾರ್ ಎಲ್ಲಾ ವಿಚಾರವನ್ನು ಚರ್ಚೆ ಮಾಡಿದ್ದರು. ವಿರೋಧ ಪಕ್ಷದವರು ಹೇಳುವುದೆಲ್ಲಾ ಸತ್ಯ ಅಲ್ಲ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಇವರು ಎಲ್ಲದರಲ್ಲೂ ರಾಜಕೀಯ ಮಾಡುತ್ತಿದ್ದಾರೆ. ಅದು ಬಿಟ್ಟರೆ ಬೇರೇ ಏನೂ ಇಲ್ಲ ಎಂದು ಪುನರುಚ್ಚರಿಸಿದರು.

**ಚಾಮುಂಡಿ ಚಲೋ: ಕಿಡಿ –**ದಸರಾ ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ರವರನ್ನು ಆಹ್ವಾನಿಸಿರುವುದನ್ನು ವಿರೋಧಿಸಿ ಬಿಜೆಪಿ ನಾಯಕರು ದಸರಾ ಮುನ್ನವೇ ಚಾಮುಂಡಿ ಬೆಟ್ಟ ಚಲೋ ನಡೆಸಲು ಮುಂದಾಗಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜೆಪಿಯವರು ಮಾಡಲಿ ಬಿಡಿ, ನಾನು ಬೇಡ ಎನ್ನಲ್ಲ. ಈ ಹಿಂದೆ ಮಹಾರಾಜರು ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ರವರನ್ನು ಅಂಬಾರಿ ಮೇಲೆ ಕೂರಿಸಿಕೊಂಡು ಹೋಗಿದ್ದರು. ಆಗ ಬಿಜೆಪಿಯವರು ಎಲ್ಲಿ ಹೋಗಿದ್ದರು. ಈ ಹಿಂದೆ ಸಾಹಿತಿ ನಿಸಾರ್ ಅಹಮದ್ ಅವರು ದಸರಾ ಉದ್ಘಾಟಿಸಿದ್ದರು. ಆಗ ಬಿಜೆಪಿ, ಆರ್‌ಎಸ್‌ಎಸ್‌ನವರು ಎಲ್ಲಿದ್ದರು. ಈಗ ಮಾತ್ರ ಬಾನು ಮುಷ್ತಾಕ್‌ಗೆ ವಿರೋಧ ಏಕೆ ಎಂದು ಪ್ರಶ್ನಿಸಿದರು.

ಕನ್ನಡದ ಭುವನೇಶ್ವರಿ ದೇವಿಯ ಅರಿಶಿನ–ಕುಂಕುಮದ ಬಗ್ಗೆ ಬಾನು ಮುಷ್ತಾಕ್ ಮಾತನಾಡಿದ್ದಾರೋ, ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಅವರು ಕನ್ನಡ ಮೇಲಿನ ಅಭಿಮಾನ ಪ್ರೀತಿಯಿಂದ ಕನ್ನಡದಲ್ಲೇ ಬರೆಯುತ್ತಿದ್ದಾರೆ. ಬಾನು ಮುಷ್ತಾಕ್ ಅವರು ಅರಿಶಿನ–ಕುಂಕುಮ ಹಾಕಿಕೊಂಡು ಬಂದು ದಸರಾ ಉದ್ಘಾಟಿಸಬೇಕು ಎಂಬ ಬಿಜೆಪಿ ನಾಯಕರ ಹೇಳಿಕೆ ಸರಿಯಲ್ಲ. ಬೇರೆ ಧರ್ಮದವರನ್ನು ಅರಿಶಿನ–ಕುಂಕುಮ ಹಾಕಿಕೊಳ್ಳಿ ಎಂದರೆ ಹೇಗೆ, ಅವರನ್ನು ನಾವು ಹಿಂದೂಗಳಗನ್ನಾಗಿ ಎಂದು ಹೇಳುವುದು ಸರಿಯೇ, ಅವರ ಧರ್ಮದಲ್ಲಿ ಅದು ಇದೆಯೇ ಎಂದು ಮುಖ್ಯಮಂತ್ರಿಗಳು ಬಿಜೆಪಿ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

ಸಾಹಿತಿ ಬಾನು ಮುಷ್ತಾಕ್ ವಿರುದ್ಧ ಯಾವುದೇ ತತ್ವ ಹೊರಡಿಸಿಲ್ಲ ಎಂದು ಮುಸ್ಲಿಂ ಧರ್ಮಗುರುಗಳೇ ಸ್ಪಷ್ಟನೆ ನೀಡಿದ್ದಾರೆ. ಹೀಗಿರುವಾಗ ಬಿಜೆಪಿಯವರು ಸುಳ್ಳುಗಳನ್ನು ಹೇಳುತ್ತಾ ರಾಜಕೀಯ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

# ಒಳ ಮೀಸಲಾತಿ ಹಂಚಿಕೆ: ಮರು ಪರಿಶೀಲನೆಗೆ ಬಿಜೆಪಿ ಆಗ್ರಹ



**ಬೆಂಗಳೂರು,ಸೆ.2–**ಪರಿಶಿಷ್ಟ ಸಮುದಾಯದ ಒಳ ಮೀಸಲು ಹಂಚಿಕೆ ಬಗ್ಗೆ ಅಸಮಾಧಾನ ಹೊರ ಹಾಕಿರುವ ಬಿಜೆಪಿ, ಒಳ ಮೀಸಲಾತಿ ಹಂಚಿಕೆಯನ್ನು ಮರುಪರಿಶೀಲನೆ ಮಾಡಬೇಕೆಂದು ಒತ್ತಾಯಿಸಿದೆ.

ಸಿದ್ದರಾಮಯ್ಯರವರು ರೂಪಿಸಿರುವ ಒಳ ಮೀಸಲಾತಿ ವರ್ಗೀಕರಣ ರಾಜಕೀಯ ಒತ್ತಡದಲ್ಲಿ ತೆಗೆದುಕೊಂಡ ನಿರ್ಧಾರವಾಗಿದೆ. ಪರಿಶಿಷ್ಟ ಜಾತಿಯ 101 ಜಾತಿಗಳಿಗೆ ನ್ಯಾಯ ಕೊಡುವಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಫಲರಾಗಿದ್ದಾರೆ ಎಂದು ದೂರಿದೆ.

ಬಿಜೆಪಿ ಕಚೇರಿಯಲ್ಲಿಂದು ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸದ ಗೋವಿಂದ ಕಾರಜೋಳ, ಕೇಂದ್ರದ ಮಾಜಿ ಸಚಿವ ಕೆ.ನಾರಾಯಣಸ್ವಾಮಿ ಇವರುಗಳು ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರ ವರದಿಯನ್ನು ಗಾಳಿಗೆ ತೂರಿದೆ. ಶಿಫಾರಸ್ಸನ್ನು ಬದಿಗಿಟ್ಟಿದೆ. ಸಾಮಾಜಿಕ ಬದ್ಧತೆ ಪ್ರದರ್ಶನ ಮಾಡಿದ್ದ ಮಾಧುಸ್ವಾಮಿ ನೇತೃತ್ವದ ವರದಿಯನ್ನು ಧಿಕ್ಕರಿಸಿದೆ. ಆ ಮೂಲಕ ಸಂವಿಧಾನದ ಆಶಯಗಳಿಗೆ ಧಕ್ಕೆ ತಂದಿದೆ. ಸಿದ್ದರಾಮಯ್ಯ ಸರ್ಕಾರದ ಒಳ ಮೀಸಲಾತಿ ಹಂಚಿಕೆಯನ್ನು ನಾವು ಒಪ್ಪಲ್ಲ. ಇದು ಸರ್ವ ಸಮ್ಮತ ಅಲ್ಲ ಎಂದಿದ್ದಾರೆ.

ಪರಿಶಿಷ್ಟ ಸಮುದಾಯದ 101 ಜಾತಿಗೆ ಇದರಿಂದ ನ್ಯಾಯ ಸಿಕ್ಕಿಲ್ಲ. ಸಚಿವರಾದ ಡಾ. ಜಿ. ಪರಮೇಶ್ವರ್, ಡಾ. ಎಚ್.ಸಿ ಮಹದೇವಪ್ಪ ಹಾಗೂ ಶಿವರಾಜ್ ತಂಗಡಗಿ ಅವರಿಗೆ ಮಾತ್ರ ಸಮಾಧಾನವಾಗಿದೆ ಅಷ್ಟೆ ಎಂದರು.

ಅಲೆಮಾರಿ ಸಮುದಾಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು. ಈ ಅನ್ಯಾಯದ ವಿರುದ್ಧ ನಾಳೆ ರಾಜ್ಯಾದ್ಯಂತ್ರ ಹೋರಾಟ ಮಾಡುತ್ತಿದೆ ಅವರಿಗೆ ಸರ್ಕಾರ ನ್ಯಾಯ ಕೊಡಬೇಕು ಎಂದು ಒತ್ತಾಯಿಸಿದರು.

ಒಳ ಮೀಸಲಾತಿಯನ್ನು ಸಮರ್ಪಕವಾಗಿ ಹಂಚುವ ಸಂಬಂಧ ಸರ್ವ ಪಕ್ಷದ ಜನಪ್ರತಿನಿಧಿಗಳ ಹಾಗೂ ವಿಚಾರ ಜ್ಞಾನ ಹೊಂದಿರುವವರ ಸಭೆ ಮಾಡಿ ಸಾಮಾಜಿಕ ನ್ಯಾಯ ಒದಗಿಸಿ ಎಂದು ಒತ್ತಾಯಿಸಿದರು.

ಒಳ ಮೀಸಲಾತಿ ವಿಚಾರದಲ್ಲಿ ಸರ್ಕಾರ ದಿಕ್ಕುದಿಸೆಯಿಲ್ಲದ ತೀರ್ಮಾನ ಕೈಗೊಂಡಿದೆ. ಮಾದಿಗ ಸಮುದಾಯದ ಅನಿಸಿಕೆಗೂ ಮಂಕುಬೂದಿ ಹಚ್ಚಿದ್ದಾರೆ. ಸುಪ್ರೀಂಕೋರ್ಟ್ ಆದೇಶ ಹಾಗೂ ನಾಗಮೋಹನ್‌ದಾಸ್ ವರದಿ ಪಾಲನೆಯಾಗಿಲ್ಲ. ಒಳ ಮೀಸಲಾತಿ ಪದಕ್ಕೆ ಅರ್ಥ ಇಲ್ಲದಂತಾಗಿದೆ ಎಂದು ಇವರುಗಳು ಟೀಕಿಸಿದರು.

# ಮಾನವೀಯ ಮೌಲ್ಯದ ಮಹಾ ಕೊಂಡಿ ಮುಂದಿನ ಪೀಳಿಗೆಗೆ ಪ್ರೇರಣೆ : ಡಾ.ಸದಾನಂದ ಪೆರ್ಲ



**ಮಂಗಳೂರು,ಸೆ.02–**ಹಿರಿಮೆಯ ಮನೆತನಗಳ ಪರಂಪರೆಯ ಹಿರಿತನದಲ್ಲಿ ಬೆಳೆದು ಸಂಸ್ಕಾರ ನೀಡಿ ಸಮಾಜಕ್ಕೆ ಕೊಡುಗೆಯಾಗಿ ಬಾಳುವುದೇ ನಿಜವಾದ ಕುಟುಂಬದ ಆದರ್ಶ ಅಂತಹ ಮಾನವೀಯ ಮೌಲ್ಯದ ಕೊಂಡಿಯಾಗಿ ಬೆಳೆದವರು ಸಂಜೀವಿ ನಾರಾಯಣ ಅಡ್ಯಂತಾಯ ಎಂದು ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಮುಖ್ಯಸ್ಥರಾದ ಡಾ. ಸದಾನಂದ ಪೆರ್ಲ ಹೇಳಿದರು.

ಮಂಗಳೂರಿನ ಕರಾವಳಿ ಲೇಖಕಿಯರ ಮತ್ತು ವಾಚಕಿಯರ ಸಂಘದ ವತಿಯಿಂದ ಆಗಸ್ಟ್ 30 ರಂದು ನಡೆದ ಸಂಜೀವಿ ನಾರಾಯಣ ಅಡ್ಯಂತಾಯ ಸ್ಮರಣಾರ್ಥ ಸಂಜೀವಿನಿ ಪ್ರಶಸ್ತಿ ಮತ್ತು ಸಂಜೀವಿ ಶತಮಾನೋತ್ಸವ ಸಂಭ್ರಮ ಕಾರ್ಯಕ್ರಮದಲ್ಲಿ ಸಂಸ್ಮರಣೆ ಭಾಷಣ ಮಾಡುತ್ತ ಆದರ್ಶ ಮತ್ತು ಮಾದರಿ ಮರೆಯಾಗುತ್ತಿರುವ ಕಾಲಘಟ್ಟದಲ್ಲಿ ಮುಂದಿನ ಪೀಳಿಗೆಗೆ ಇಂತಹ ಸಾರ್ಥಕ ಬದುಕಿನ ಆದರ್ಶದ ಪರಂಪರೆಯನ್ನು ಕಟ್ಟಿಕೊಟ್ಟ ಹಾಗೂ ಮಾನವೀಯ ಮೌಲ್ಯವನ್ನು ಎತ್ತಿ ಹಿಡಿದವರ ಬಗ್ಗೆ ಸ್ಮರಣೆ ಮಾಡುವುದರಿಂದ ಸ್ವಾಸ್ಥ್ಯ ಸಮಾಜದ ನಿರ್ಮಾಣ ಸಾಧ್ಯ ಮತ್ತು ಮುಂದಿನ ಪೀಳಿಗೆಗೆ ಪ್ರೇರಣೆಯಾಗಲಿದೆ . ಬೊಳ್ಳ ಗುತ್ತು ಮತ್ತು ಎಣ್ಮಕಜೆ ಮನೆತನದ ಸಾಂಸ್ಕೃತಿಕ ಗರಿಮೆಯನ್ನು ಮೈಗೂಡಿಸಿ ಮಕ್ಕಳನ್ನು ವಿವಿಧ ರಂಗದಲ್ಲಿ ತೊಡಗಿಸುವಂತೆ ಸಂಸ್ಕಾರ ನೀಡಿರುವ ಸಂಜೀವಿ ಅವರದು ತ್ಯಾಗದ ಬದುಕು. ರಾಜಕೀಯಕ್ಕೆ ಶಕುಂತಳ ಶೆಟ್ಟಿ, ಉದ್ಯಮಿ ಶಶಿಕಲಾ ಶೆಟ್ಟಿ, ಗೋಪಾಲಕೃಷ್ಣ ಅಡ್ಯಂತಾಯ, ತುಳು , ಕನ್ನಡ ಸಾಹಿತಿಯಾಗಿ ರೂಪಕಲಾ ಆಳ್ವ ಹೀಗೆ ಮಕ್ಕಳನ್ನು ಸಂಸ್ಕಾರ ನೀಡಿ ಬೆಳೆಸಿದ ಬಗೆ ಆದರ್ಶಪ್ರಾಯವಾದುದು ಇದರಿಂದಾಗಿ ಪೆರ್ಲದ ಹೆಸರು ನಾಲ್ದೆಸೆಗಳಲ್ಲಿ ಹರಡುವಂತಾಯಿತು ಎಂದು ಡಾ.ಪೆರ್ಲ ಹೇಳಿದರು.

ಅಮ್ಮ ತ್ಯಾಗದ ಸಂಕೇತ ಮತ್ತು ಪರಂಪರೆ ಸಂಸ್ಕಾರದ ಮಾದರಿಯಾಗಿದ್ದು ಸಂಜೀವಿ ಅಡ್ಯಂತಾಯರು ಅವಿಭಕ್ತ ಕುಟುಂಬ ಜೀವನ ಮಾಡಿ ಶ್ರೀಮಂತಿಕೆಯಿದ್ದರೂ ಕಷ್ಟದ ಬದುಕಿನ ಶ್ರೇಷ್ಠ ಪಾಠ ಕಲಿತ ದ್ಯೋತಕವಾಗಿ ಆದರ್ಶದ ಬಾಳ್ವೆ ನಡೆಸಿದರು.ಅಂತಹ ಅಮ್ಮಂದಿರು ಹೆಚ್ಚಾಗಿ ಆದರ್ಶ ಸಮಾಜ ನಿರ್ಮಾಣವಾಗಲಿ ಎಂದು ವಿಶ್ರಾಂತ ಕುಲಪತಿ ಡಾ.ಚಿನ್ನಪ್ಪ ಗೌಡ ಹೇಳಿದರು.

ಕರಾವಳಿ ಲೇಖಕಿಯರ ಮತ್ತು ವಾಚಕಿಯರ ಸಂಘಕ್ಕೆ ಈ ಸಂಸ್ಮರಣೆ ಕಾರ್ಯಕ್ರಮ ಹೆಮ್ಮೆ ತಂದಿದೆ ಮತ್ತು ಸಂಜೀವಿನಿ ಪ್ರಶಸ್ತಿ ಪುರಸ್ಕೃತ ಮೂವರು ಸಾಧಕರನ್ನು ಗುರುತಿಸಿರುವುದು ಶ್ಲಾಘನೀಯ ಕಾರ್ಯ ಎಂದು ನಿವೃತ್ತ ಶಿಕ್ಷಕಿ ಕೆ ಎ. ರೋಹಿಣಿ ಅಭಿಪ್ರಾಯಪಟ್ಟರು.

ತಾಯಿ ಕೊಟ್ಟ ಮಮತೆ ಮತ್ತು ಸಂಸ್ಕಾರದಿಂದ ಮಕ್ಕಳು ವಿವಿಧ ಕ್ಷೇತ್ರಗಳಲ್ಲಿ ಬೆಳವಣಿಗೆ ಹೊಂದಬಹುದು ಎಂಬುದಕ್ಕೆ ಸಂಜೀವಿ ಅಡ್ಯಂತಾಯ ಕುಟುಂಬ ಸಾಕ್ಷಿಯಾಗಿದೆ ಇಲ್ಲವಾದರೆ ತಾನು ವಿಧಾನ ಸಭೆ ಪ್ರವೇಶಿಸುವ ಅರ್ಹತೆ ಪಡೆಯುತ್ತಿರಲಿಲ್ಲ.ಅಮ್ಮನ ಅನ್ನ ದಾಸೋಹದ ಪುಣ್ಯ ಜೀವನುದ್ಧಕ್ಕೂ ಲಭಿಸಿದೆ ಎಂದು ಸಭೆಯ ಅಧ್ಯಕ್ಷತೆ ವಹಿಸಿದ ಮಾಜಿ ಶಾಸಕಿ ಶಕುಂತಲಾ ಶೆಟ್ಟಿ ಭಾವುಕರಾಗಿ ಸ್ಮರಿಸಿದರು.

ಸಂಜೀವಿನಿ ಪ್ರಶಸ್ತಿ ಪುರಸ್ಕೃತರು

ಖ್ಯಾತ ಯಕ್ಷಗಾನ ಕಲಾವಿದರಾದ ಕೆಎಚ್ ದಾಸಪ್ಪ ರೈ ಉದ್ಯಮಿ ಸುಲೋಚನಾ ಭಟ್ ಬೆದ್ರಡಿ ಸೀತಂಗೋಳಿ ಹಾಗೂ ಕೃಷಿಕರಾದ ಉಮಾವತಿ ವೆಂಕಪ್ಪ ಪೂಜಾರಿ ಬೊಂಡಂತಿಲ ಇವರನ್ನು ಶಾಲು, ಸ್ಮರಣಿಕೆ ಹಾಗೂ ನಗದು ಪುರಸ್ಕಾರಗಳೊಂದಿಗೆ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಉದ್ಯಮಿ ಶಶಿಕಲಾ ಆರ್ ಶೆಟ್ಟಿ ಚೆನ್ನೈ, ರವಿಕಲಾ, ಚಂದ್ರಕಲಾ, ರೂಪಕಲಾ , ಗೋಪಾಲಕೃಷ್ಣ ಅಡ್ಯಂತಾಯ, ಕೃಷ್ಣ ಪ್ರಸಾದ್ ಅಡ್ಯಂತಾಯ, ಸ್ವಾತಿ , ಬಿಪಿನ್ ಶೆಟ್ಟಿ, ಅಕ್ಷತಾ, ಸಚಿನ್ ಶೆಟ್ಟಿ ಶ್ವೇತಾ, ಅಕ್ಷತ್ ಶೆಟ್ಟಿ, ದಿಪುಲ್, ಪೃಥ್ವೀ ರಾಜ್ ಭಂಡಾರಿ , ಆಶ್ರಿತಾ ಶೆಟ್ಟಿ ಹಾಗೂ ಕರಾವಳಿ ಲೇಖಕಿಯರ ಮತ್ತು ವಾಚಕೀಯರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪ್ರಶಸ್ತಿ ಪುರಸ್ಕೃತರು ಸನ್ಮಾನಕ್ಕೆ ಅಭಿವಂದನೆ ಸಲ್ಲಿಸಿದರು.ಪ್ರಶಸ್ತಿ ಪ್ರಾಯೋಜಕರಾದ ರೂಪಕಲಾ ಆಳ್ವ ಸ್ವಾಗತಿಸಿ ಪ್ರಾಸ್ತಾವಿಕ ಭಾಷಣ ಮಾಡಿದರು. ವೋಲಿ ಮಿರಾಂಡಾ ಧನ್ಯವಾದವಿತ್ತರು.ಉಪನ್ಯಾಸಕಿ ಕವಿತಾ ಪಕ್ಕಳ ನಿರೂಪಣೆ ಮಾಡಿದರು. ಜರ್ನಿ ಥಿಯೇಟರ್ ಮಂಗಳೂರು ತಂಡ ದ ಕಲಾವಿದರು ರಂಗಗೀತೆ ಪ್ರಸ್ತುತಪಡಿಸಿದರು.

# ಫೋಟೊಗ್ರಫಿ ಕೇವಲ ಚಿತ್ರ ತೆಗೆಯುವುದಲ್ಲ, ಕ್ಷಣಗಳನ್ನು ಶಾಶ್ವತವಾಗಿ ಉಳಿಸುವ ಕಲೆ



**ಆಳಂದ,0ಸೆ.2–**ಫೋಟೊಗ್ರಫಿ ಎಂದರೆ ಕೇವಲ ಚಿತ್ರಗಳನ್ನು ತೆಗೆದು ಮಾತ್ರವಲ್ಲ ಅದು ಕ್ಷಣಗಳನ್ನು ಶಾಶ್ವತವಾಗಿ ಉಳಿಸುವ ಕಲೆಯಾಗಿದೆ ಎಂದು ಮಾದನಹಿಪ್ಪರಗಾ ಮಠದ ಪೀಠಾಧಿಪತಿ ಅಭಿನವ ಶಿವಲಿಂಗ ಮಹಾಸ್ವಾಮಿಗಳು ನುಡಿದರು.

ಪಟ್ಟಣದ ಶ್ರೀಶಕ್ತಿ ಭವಾನಿ ಮಂದಿರದಲ್ಲಿ ತಾಲೂಕು ಛಾಯಾಗ್ರಾಹಕ ಸಂಘದ ಅಡಿಯಲ್ಲಿ ಹಮ್ಮಿಕೊಂಡಿದ್ದ 186ನೇ ವಿಶ್ವ ಛಾಯಾಗ್ರಾಹಕರ ದಿನಾಚರಣೆ ಹಾಗೂ ಛಾಯಾಗ್ರಾಹಕರ ಮಹೋತ್ಸವ ಕಾರ್ಯಕ್ರಮದಲ್ಲಿ ಹಿರಿಯ ಛಾಯಾ ಸಾಧಕ, ಹಿರಿಯ ಸಲಹೆಗಾರರಿಗೆ ಹಾಗೂ ಪತ್ರಕರ್ತರಿಗೆ ಕಾಣಿಕೆ ನೀಡಿ ಸನ್ಮಾನಿಸಿ ಗೌರವಿಸಿ ಆರ್ಶೀವಚನ ನೀಡಿದ ಅವರು, ಇತ್ತೀಚಿನ ದಿನಗಳಲ್ಲಿ ಕಲ್ಬುರ್ಗಿ ವಿಭಾಗದ ಸಂಘ ಸಂಸ್ಥೆಗಳು ಉತ್ತಮ ಕೆಲಸ ಮಾಡುತ್ತಿದ್ದು, ಸಂತೋಷದ ವಿಷಯವಾಗಿದೆ ಎಂದರು.

ಹಿರೇಮಠದ ಸಿದ್ಧೇಶ್ವರ ಶಿವಾಚಾರ್ಯರು ಸಾನಿಧ್ಯ ವಹಿಸಿ ಆರ್ಶೀವಚನ ನೀಡಿ, ಮಾನವೀಯ ಮೌಲ್ಯಗಳನ್ನು ಪ್ರತಿಬಿಂಬಿಸುವ ಚಿತ್ರಗಳನ್ನು ಸೆರೆಹಿಡಿಯುವ ಛಾಯಾಗ್ರಾಹಕರು ಸಾಮಾನ್ಯವಾಗಿ ಸಾಮಾಜಿಕ ಸಂದೇಶ, ಮಾನವೀಯ ಕಾಳಜಿ ಮತ್ತು ನೈತಿಕ ಮೌಲ್ಯಗಳನ್ನು ಹಂಚುವ ಉದ್ದೇಶ ಹೊಂದಿರುತ್ತಾರೆ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಕೆಎಂಎಫ್ ಅಧ್ಯಕ್ಷ ಆರ್.ಕೆ.ಪಾಟೀಲ್ ಮಾತನಾಡಿ, ಸಂಘಟನೆಯಲ್ಲಿ ಶಕ್ತಿ ಅಡಗಿದೆ, ಛಾಯಾಗ್ರಹಣ ಕೇವಲ ಹವ್ಯಾಸವಲ್ಲ, ಅದು ವೃತ್ತಿ ಆಗಬಹುದು, ಆದಾಯದ ಮೂಲ ಆಗುತ್ತದೆ, ಒಂದು ಕ್ಯಾಮೆರಾ ಮತ್ತು ಸೃಜನಶೀಲ ಕಣ್ಣು ಇದ್ದರೆ, ನಾವು ಜೀವನದಲ್ಲಿ ಸ್ವಾವಲಂಬಿಯಾಗಿ ಬೆಳೆಯಬಹುದು ಹಾಗೂ ಸಂಘ ಬೆಳೆಯಲು ಪ್ರತಿ ಒಬ್ಬ ಸದಸ್ಯರು ತಿಂಗಳಿಗೆ ಒಂದಿಷ್ಟು ಹಣ ಉಳಿತಾಯ ಮಾಡಿ ಬಲವರ್ಧನೆ ಸಹಾಯವಾಗಲಿದೆ ಎಂದರು.

ಜೆಡಿಎಸ್‌ನ ಮಹೇಶ್ವರ ವಾಲಿ ಅವರು ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿದರು. ಜಿಲ್ಲಾಧ್ಯಕ್ಷ ಬಸವರಾಜ ತೋಟದ ಮಾತನಾಡುತ್ತ, ಒಂದು ಛಾಯಾಚಿತ್ರ ಸಾವಿರ ಪದಗಳ ಅರ್ಥ ಎಂದು ಇಡಿ ವಿಶ್ವವೇ ಕೊಂಡಾಡುತ್ತದೆ. ಹಾಗೆ ನಮ್ಮ ಛಾಯಾಗ್ರಾಹಕರ ಸಲುವಾಗಿ ಹೊಸ ಹೊಸ ತಂತ್ರಜ್ಞಾನದ ತರಬೇತಿ ಮಾಡಿಸುವುದೆ ನಮ್ಮ ಸಂಘದ ಉದ್ದೇಶ ವಾಗಿದೆ. ಹಾಗೂ ಛಾಯಾಗ್ರಹಣ ಉಳಿಸಿ ಬೆಳೆಸುವುದು ನಮ್ಮ ಜವಬ್ದಾರಿ ಆಗಿದೆ ಎಂದು ನುಡಿದರು.

ಈ ಸಂಧರ್ಭದಲ್ಲಿ ಅಸೊಶಿಯೇಶನ್ ಸಲಹೆಗಾರರಾದ ಚಂದ್ರಶೇಖರ ಬ್ಯಾಕೋಡ ಪ್ರಭು ಜುಮ್ಮಣ್ಣ ಹಿರಿಯ ಛಾಯಾಗ್ರಾಹಕರಾದ ನಾಗೇಂದ್ರ ಸಕ್ಕರಗಿ ಉಪಾಧ್ಯಕ್ಷ ಸೈಯದ ನಸಿರುದ್ದೀನ, ಅನೀಲ ಗಣೇಶಕರ, ಸುನೀಲ ಪಾಟೀಲ್, ತಾಲೂಕು ಅಧ್ಯಕ್ಷ ಪ್ರಕಾಶ ಜಂಗಲೇ ಅಧ್ಯಕ್ಷತೆ ವಹಿಸಿದರು.

ಶಿವಾನಂದ ಧನ್ನಿ, ಗುಂಡೇರಾವ ಗಂಬೀರೆ, ರವೀಂದ್ರ ಪಟ್ಟಣಶಟ್ಟಿ, ಪ್ರವೀಣ ಮೋದಲೆ, ಬಸವರಾಜ ಗುಳೇದಗುಡ್ಡ, ಮಲ್ಲಿಕಾರ್ಜುನ ಜಾಧವ, ಮಹೇಶ ರಂಗದಾಳ, ಶ್ರೀಶೈಲ ಬೇಲೂರ, ದಿಲೀಪ ಏಟೆ, ಸಂತೋಷ ಕಾಮಣೆ, ಶ್ರೀಶೈಲ ಪಾಟೀಲ್ ಸೇರಿದಂತೆ ಛಾಯಾಗ್ರಾಹಕರು, ಮುಖಂಡರು ಉಪಸ್ಥಿತರಿದ್ದರು. ರಾಜಶೇಖರ ಕಡಗನ ನಿರೂಪಿಸಿದರು, ನಾಗರಾಜ ಪಟ್ಟಣಶಟ್ಟಿ ವಂದಿಸಿದರು,

ಹಿರಿಯ ಛಾಯಾ ಸಾಧಕ , ಪತ್ರಕರ್ತರಿಗೆ ಮತ್ತು ಹಿರಿಯ ಸಲಹೆಗಾರರಿಗೆ ವಿಶೇಷ ಸನ್ಮಾನಿಸಲಾಯಿತು.

ಇಷ್ಟಲಿಂಗಪ್ಪಾ ವಮನೆ, ಬಾಬುರಾವ ಐನಶೆಟ್ಟಿ, ಚಂದ್ರಶೇಖರ ಜಂಗಲೇ, ಕಿಶನ ರಂಗದಳ, ಬಸವಕುಮಾರ ಹೋಸಳ್ಳಿ, ಚಂದ್ರಕಾಂತ ಪಾಟೀಲ್, ನಾಗೇಂದ್ರಪ್ಪಾ ದೇವಣಗಾಂವ, ದಿಗಂಬರ ರಂಗದಳ, ಮಹಾವೀರ ಪಟವಾ, ಸುಜೀತ ಜಾಧವ, ಕಿಶನ ಚವ್ಹಾಣ, ಚಂದ್ರಕಾಂತ ಶೇರಿಕರ, ಚನ್ನವೀರ ಬಿರಾದಾರ, ಸಂತೋಷ ಪಾಟೀಲ್, ರಮೇಶ ಜಮಾದಾರ, ರಾಜು ಮೊದಗಲೆ, ಸಂಜಯ ಎಸ್.ಪಾಟೀಲ್, ಡಿ.ಎಂ.ಪಾಟೀಲ್, ಶಾಂತಪ್ಪ ಕೋರೆ ವಿಶೇಷವಾಗಿ ಸನ್ಮಾನಿಸಿ, ಗೌರವಿಸಲಾಯಿತು.

# ಮಟಕಾ: ಓರ್ವ ಬಂಧನ

**ಕಲಬುರಗಿ,ಸೆ.02–**ನಗರದ ಮಿರ್ಚಿ ಗೋದಾಮ ಹತ್ತಿರದ ಮದೀನಾ ಕಾಲೋನಿಯ ಕಲ್ಯಾಣಿ ಕ್ರಾಸ್ ಹತ್ತಿರವಿರುವ ಕರ್ನಾಟಕ ಸ್ಕ್ರಾಪ್ ಅಂಗಡಿ ಮುಂದಿನ ಸಾರ್ವಜನಿಕ ರಸ್ತೆ ಮೇಲೆ ಮಟಕಾ ನಂಬರ್ ಬರೆದುಕೊಳ್ಳಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸಿಸಿಬಿ ಘಟಕದ ಪಿಐ ದಿಲೀಪಕುಮಾರ ಸಾಗರ, ಸಿಬ್ಬಂದಿಗಳಾದ ಮೃತ್ಯುಂಜಯ, ಯಲ್ಲಪ್ಪ, ಶಿವಕುಮಾರ, ಸುನಿಲಕುಮಾರ ಅವರು ದಾಳಿ ನಡೆಸಿ ಗುಲ್ಲಾಬಾಡಿಯ ರೂಪ್ಲೋನ್ ತಂದೆ ರವಿಕುಮಾರ (24) ಎಂಬಾತನನ್ನ ಬಂಧಿಸಿ 4,300 ರೂ.ನಗದು, ಒಂದು ಮಟಕಾ ಚೀಟಿ ಮತ್ತು ಒಂದು ಬಾಲ್ ಪೆನ್ ಜಪ್ತಿ ಮಾಡಿದ್ದಾರೆ. ಆರ್.ಜಿ.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# 1.16 ಲಕ್ಷ ರೂ.ಮೌಲ್ಯದ ಮೊಬೈಲ್ ಕಳವು

**ಕಲಬುರಗಿ,ಸೆ.2–**ಡಬರಾಬಾದ ಕ್ರಾಸ್‌ನಲ್ಲಿರುವ ಫ್ಲಿಪ್‌ಕಾರ್ಟ್ ಆಫೀಸ್‌ನಲ್ಲಿ ಪಾರ್ಸ್‌ಲ್‌ಗಳನ್ನು ವಾಪಸ್ ಮಾಡುವ ಲೋಡ್‌ಗಾಡಿಯಿಂದ ವಿವಿಧ ಕಂಪನಿಯ 1.16 ಲಕ್ಷ ರೂ.ಮೌಲ್ಯದ ಮೊಬೈಲ್‌ಗಳನ್ನು ಕಳವು ಮಾಡಲಾಗಿದೆ ಎಂದು ಫ್ಲಿಪ್‌ಕಾರ್ಟ್‌ದಲ್ಲಿ ಟೀಮ್ ಲೀಡರ್ ಆಗಿರುವ ಸುನೀಲ ನಾಗದೆ ಅವರು ಆರ್.ಜಿ.ನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ತನಿಖೆ ನಡೆದಿದೆ.

# ಕೊಲೆ ಅಪರಾಧಿಗೆ ಜೀವಾವಧಿ ಶಿಕ್ಷೆ

**ರಾಯಚೂರು,ಸೆ.02–**ಕೊಲೆ ಮಾಡಿದ ಅಪರಾಧಿಗೆ ರಾಯಚೂರಿನ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಕಲಂ 504, 506 ಮತ್ತು 302 ಆಫ್ ಐಪಿಸಿ ಅಡಿಯಲ್ಲಿ ಜೀವಾವಧಿ ಶಿಕ್ಷೆ ವಿಧಿಸಿದೆ.

ಹೊಲ ಸ್ವಚ್ಛ ಮಾಡಿ ಸಾಗುವಳಿ ಮಾಡಿದ್ದು ಸ್ವಚ್ಛ ಮಾಡಿದ ಕೂಲಿ ಹಣ ವ್ಯತ್ಯಾಸವಾಗಿ ಜಗಳ ಮಾಡಿಕೊಂಡಿದ್ದು, ಅದೇ ವರ್ಷ ಗಣೇಶ ಮೂರ್ತಿ ತರುವ ವಿಚಾರದಲ್ಲಿಯೂ ಇಬ್ಬರ ನಡುವೆ ಜಗಳವಾಗಿ ಆ ಸಮಯದಲ್ಲಿ ಆರೋಪಿತನು ದ್ವೇಷ ಸಾಧಿಸುತ್ತ ದಿನಾಂಕ 12–03–2017ರಂದು ರಾತ್ರಿ 9 ಗಂಟೆ ಸುಮಾರಿಗೆ ಕಬ್ಬಿಣದ ಚಾಕುವಿನಿಂದ ಈ ಪ್ರಕರಣದ ಸಾಕ್ಷಿ ನಂ.6ರ ಮಗನಾದ ಕೆ ಬಸವ ಎಂಬಾತನ ಹೊಟ್ಟೆಗೆ ಚುಚ್ಚಿದಾಗ ರಕ್ತ ಸ್ರಾವವಾಗಿ, ತೀವ್ರ ಸ್ವರೂಪದ ಗಾಯಗೊಂಡು ರಿಮ್ಸ್ ಆಸ್ಪತ್ರೆಗೆ ದಾಖಲಾಗಿದ್ದು 13–03–2017ರಂದು ಬೆಳಗ್ಗೆ ಮೃತಪಟ್ಟಿದ್ದಾನೆ ಎಂದು ರಮೇಶ ಎಂಬುವರು ಸಲ್ಲಿಸಿದ ಪಿರ್ಯಾದಿ ಆಧಾರದ ಮೇಲೆ ಸಿರವಾರ ಪೊಲೀಸ್ ಠಾಣೆಯ ಆರಕ್ಷಕರು ಪ್ರಕರಣವನ್ನು ದಾಖಲು ಮಾಡಿಕೊಂಡು ಆಗಿನ ಶ್ರೀ ಚಂದ್ರಶೇಖರ ಜಿ., ಸಿಪಿಐ ಮಾನವಿ ಇವರು ಪ್ರಕರಣದ ತನಿಖೆಯನ್ನು ಪೂರೈಸಿ ಆರೋಪಿತನ ವಿರುದ್ಧ ಮಾನ್ಯ ನ್ಯಾಯಾಲಯದಲ್ಲಿ ದೋಷಾರೋಪಣೆ ಪತ್ರ ಸಲ್ಲಿಸಿದ್ದರು. ಸಾಕ್ಷಿ ಪುರಾವೆಗಳನ್ನು ಪರಿಶೀಲಿಸಿದ ಮಾನ್ಯ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಆರೋಪಿತನಾದ ಬೂದೆಪ್ಪ ಈತನು ಕೆ ಬಸವನನ್ನು ಕೊಲೆ ಮಾಡಿದ ಬಗ್ಗೆ ಸಾಕಷ್ಟು ಪುರಾವೆಗಳು ಇವೆ ಎಂದು ಅಭಿಯೋಜನೆಯು ಪ್ರಕರಣವನ್ನು ರುಜುವಾತುಪಡಿಸಿದ್ದಾರೆಂದು ನಿರ್ಣಯಕ್ಕೆ ಬಂದು ಆರೋಪಿಗೆ ಜೀವಾವಧಿ ಶಿಕ್ಷೆ ಮತ್ತು 50,000 ರೂ ದಂಡ ವಿಧಿಸಿ ತೀರ್ಪು ನೀಡಿರುತ್ತಾರೆ. ಸರ್ಕಾರದ ಪರವಾಗಿ ಶ್ರೀ ಮತಿ ಎಂ ಸರ್ವಮಂಗಳ ಸಾರ್ವಜನಿಕರು ಅಭಿಯೋಜಕರು ವಾದ ಮಂಡಿಸಿದ್ದರು ಎಂದು ರಾಯಚೂರು ಸಾರ್ವಜನಿಕ ಅಭಿಯೋಜಕರ ಕಚೇರಿ, 2ನೇ ಅಪರ ಸತ್ರ ನ್ಯಾಯಾಲಯ ರಾಯಚೂರು ಇವರ ಪ್ರಕಟಣೆ ತಿಳಿಸಿದೆ.

# ಪರೀಕ್ಷಾ ಕೇಂದ್ರಗಳ ಸುತ್ತಲು ನಿಷೇಧಾಜ್ಞೆ ಜಾರಿ

**ರಾಯಚೂರು,ಸೆ.2–** ಕರ್ನಾಟಕ ಲೋಕಸೇವಾ ಆಯೋಗವು 2024ರ ಮಾರ್ಚ್ 15 ರಂದು ಅಧಿಸೂಚಿಸಿರುವ ಪದವಿ ಮಟ್ಟದ ವಿವಿಧ ಇಲಾಖೆಗಳಲ್ಲಿನ ಗ್ರೂಪ್ ಸಿ–16 (ಹೈ.ಕ) ಹುದ್ದೆಗಳ ಪರೀಕ್ಷೆಯು ಸುರಕ್ಷಿತವಾಗಿ ನಡೆಯಲು ಭಾರತೀಯ ನಾಗರಿಕ ಸುರಕ್ಷಾ ಸಂಹಿತ 2023ರ ಕಲಂ.163 ರನ್ವಯ ಪರೀಕ್ಷಾ ಕೇಂದ್ರಗಳ ಸುತ್ತಲು 200 ಮೀಟರ್ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಆದೇಶ ಹೊರಡಿಸಿದ್ದಾರೆ.

ರಾಯಚೂರು ನಗರದ 07 ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಸುತ್ತುವರೆದ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ, ಈ ಪರೀಕ್ಷೆ ಕೇಂದ್ರಗಳ ಸುತ್ತಲಿನ ಎಲ್ಲಾ ಝುರಾಕ್ಸ್ ಅಂಗಡಿಗಳು, ಕಂಪ್ಯೂಟರ್ ಅಂಗಡಿಗಳನ್ನು ಹಾಗೂ ಸೈಬರ್ ಕಫೆಗಳನ್ನು ಪರೀಕ್ಷೆ ಸಮಯದಲ್ಲಿ ಕಡ್ಡಾಯವಾಗಿ ಮುಚ್ಚುವಂತೆ ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ.

# ಬೇಡವಾದ ನವಜಾತ ಶಿಶುವನ್ನು ದತ್ತು ಸಂಸ್ಥೆಗೆ ದಾಖಲಿಸಿ

**ರಾಯಚೂರು,ಸೆ.02–**ಬೇಡವಾದ ನವಜಾತ ಶಿಶುವನ್ನು ಸರ್ಕಾರಿ ವಿಶೇಷ ದತ್ತು ಸಂಸ್ಥೆಗೆ ಒಪ್ಪಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಯ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ರಾಯಚೂರು ಜಿಲ್ಲೆಯಲ್ಲಿ ಕಳೆದ ಒಂದು ವಾರದಲ್ಲಿ ಎರಡು ನವಜಾತ ಶಿಶುಗಳನ್ನು ಅಪರಿಚಿತ ವ್ಯಕ್ತಿಗಳು ಹಳ್ಳದ ದಂಡೆಯಲ್ಲಿ ಮತ್ತು ಕ್ಯಾನಲ್ ಪಕ್ಕದಲ್ಲಿ ಎಸೆದು ಹೋಗಿದ್ದು, ಸಾರ್ವಜನಿಕರು ನೀಡಿದ ಮಾಹಿತಿಯ ಆಧಾರದ ಮೇಲೆ ಎರಡು ಮಕ್ಕಳನ್ನು ರಕ್ಷಣೆ ಮಾಡಲಾಗಿದೆ. ಇದು ಅತ್ಯಂತ ಅಮಾನವೀಯ ಕೃತ್ಯವಾಗಿದೆ.

ನವಜಾತ ಶಿಶುಗಳು ತಮಗೆ ಬೇಡವಾದಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ:1098ಗೆ ಕರೆ ಮಾಡಿ ಮಾಹಿತಿ ನೀಡಿದಲ್ಲಿ ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಮಗುವನ್ನು ಸ್ವೀಕರಿಸಿ ಸರ್ಕಾರಿ ದತ್ತು ಸಂಸ್ಥೆಗೆ ದಾಖಲು ಮಾಡುತ್ತಾರೆ. ಈ ಪ್ರಕ್ರಿಯೆಯಲ್ಲಿ ನವಜಾತ ಮಗುವಿನ ತಾಯಿ ಪೋಷಕರಿಗೆ ಯಾವುದೇ ವಿಚಾರಣೆಗೆ ಒಳಪಡಿಸಲಾಗುವುದಿಲ್ಲ. ಈ ಬಗ್ಗೆ ಸಾರ್ವಜನಿಕರು ಯಾವುದೇ ಭಯ ಆತಂಕವಿಲ್ಲದೇ ಮಕ್ಕಳ ಸಹಾಯವಾಣಿ ಸಂಖ್ಯೆ 1098ಗೆ ಕರೆ ಮಾಡಿ ಬೇಡವಾದ ಮಗುವನ್ನು ಒಪ್ಪಿಸಬೇಕು. ಸಾರ್ವಜನಿಕರು ಯಾವುದೇ ಕಾರಣಕ್ಕು ಮಕ್ಕಳನ್ನು ಕಸದ ಬುಟ್ಟಿಯಲ್ಲಿ, ರಸ್ತೆ ಬದಿಯಲ್ಲಿ, ತಿಪ್ಪೆ ಗುಂಡಿಯಲ್ಲಿ ಹಾಕುವುದರ ಮೂಲಕ ಮಕ್ಕಳ ಸಾವಿಗೆ ಕಾರಣರಾಗಬಾರದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ನವೀನ್‌ಕುಮಾರ ಯು ಅವರು ರಾಯಚೂರು ಜಿಲ್ಲೆಯ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

# ನಟ ಕಿಚ್ಚ ಸುದೀಪ್ ಹುಟ್ಟುಹಬ್ಬ ಆಚರಣೆ

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಸೆ.2–** ಪಟ್ಟಣದ ಮಹಾತ್ಮಾಗಾಂಧೀ ವೃದ್ಧಾಶ್ರಮದಲ್ಲಿ ಕನ್ನಡ ಚಿತ್ರರಂಗದ ಮೇರುನಟ ಕಿಚ್ಚ ಸುದೀಪ್ ಅವರ ಜನ್ಮದಿನಾಚರಣೆಯನ್ನು ಮಂಗಳವಾರ ಆಚರಿಸಲಾಯಿತು.

ಅಖಿಲ ಕರ್ನಾಟಕ ಅಭಿನಯ ಕಿಚ್ಚ ಸುದೀಪ್ ಸೇನಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಮಿತಿ ಅಧ್ಯಕ್ಷ ಗಂಗಧಾರ ನಾಯಕ ಮಾತನಾಡಿ, ಕಿಚ್ಚ ಸುದೀಪ್‌ರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ವೃದ್ಧಾಶ್ರಮದ ಹಿರಿಯ ಜೀವಗಳ ಜೀವನಕ್ಕೆ ಬೇಕಾದ ದವಸ ಧಾನ್ಯ, ಹಣ್ಣು ಹಂಪಲು ನೀಡುವ ಮೂಲಕ ಆಚರಿಸಲಾಗುತ್ತಿದೆ. ಇನ್ನಷ್ಟು ಸಮಾಜ ಸೇವೆ ಮಾಡುವ ಮೂಲಕ ಕಿಚ್ಚ ಸುದೀಪರಿಗೆ ಆಯುರಾರೋಗ್ಯಭಾಗ್ಯ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸಲಾಗುತ್ತಿದೆ.



ಎಂದರು.

ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಅಮರೇಶ ಕಲ್ಲೂರು, ಸಮಿತಿ ಮುಖಂಡರಾದ ಅಮರೇಶ ಪೂಲಭಾವಿ, ಶಿವರಾಜ ಯರಗುಂಟ, ಗಣೇಶ ಹಲ್ಕಾವಟಗಿ, ಕುಪ್ಪೇಶ ಚಿತ್ತಾಪೂರ, ಅಮರೇಶ ಗೆಜ್ಜಲಗಟ್ಟ ಹನುಮಂತ ದೇವರಭೂಪೂರ, ಗದ್ದೆಪ್ಪ ಹುಲಿಗುಡ್ಡ, ಬಸವರಾಜ ಬೈಲಗುಡ್ಡ, ಕೆಂಚಣ್ಣ ಉಪ್ಪೇರಿ ಸೇರಿ ಇತರರಿದ್ದರು

## ಮಾನ್ವಿ: ಅಕ್ಷರ ಪ್ರಿಮಿಯರ್ ಲೀಗ್ ಕ್ರಿಕೆಟ್ ಟೂರ್ನಮೆಂಟ್

## ರಾಯಲ್ ಚಾಲೇಂಜರ್ಸ್ ಮಾನ್ವಿ ರನ್ನರ್ ಅಪ್

# ರೋಚಕ ಫೈನಲ್ ಪಂದ್ಯದಲ್ಲಿ ಗೆದ್ದ ಎನ್.ಜಿ.ಒ ಟೈಗರ್ಸ್ ಮಾನ್ವಿ ತಂಡ





ಯುವ ಮಾರ್ಗ ಸುದ್ದಿ

**ಮಾನ್ವಿ,ಸೆ.02–**ಶಿಕ್ಷಕರಲ್ಲಿನ ದೈನಂದಿನ ಶಾಲೆ ಕಾರ್ಯ ಚಟುವಟಿಕೆಗಳ ಒತ್ತಡ ನಿವಾರಣೆಗಾಗಿ ಕಳೆದ ನಾಲ್ಕು ವರ್ಷಗಳಿಂದ ಶಿಕ್ಷಕರ ದಿನಾಚರಣೆ ಪ್ರಯುಕ್ತ ಮಾನ್ವಿ,ಸಿರವಾರ ಶಿಕ್ಷಕರ ಬಳಗದಿಂದ ನಡೆಸುವ ಅಕ್ಷರ ಕ್ರಿಕೆಟ್ ಟೂರ್ನಮೆಂಟ್ ಈ ಬಾರಿ ಪೋತ್ನಾಳ್ ಸರ್ಕಾರಿ ಪ್ರೌಢಶಾಲೆ ಮೈದಾನದಲ್ಲಿ ಎರಡು ದಿನಗಳ ಕಾಲ ನಡೆದ ಕ್ರಿಕೆಟ್ ಟೂರ್ನಮೆಂಟ್ ನ ಫೈನಲ್ ಪಂದ್ಯದಲ್ಲಿ ಮಾನ್ವಿ ರಾಯಲ್ಸ್ ಚಾಲೆಂಜರ್ಸ್ ಮತ್ತು ಮಾನ್ವಿ ಎನ್.ಜಿ.ಒ ಟೈಗರ್ಸ್ ತಂಡಗಳ ನಡುವಿನ ನೇರ ಹಣಾಹಣಿಯು ಸೂಪರ್ ಓವರ್ ಪಂದ್ಯದ ರಣ ರೋಚಕ ಸೆಣಸಾಟದಲ್ಲಿ ಮಾನ್ವಿ ಎನ್.ಜಿ.ಒ ಟೈಗರ್ಸ್ ತಂಡ ಗೆದ್ದು ಬೀಗಿದೆ.

ಅಕ್ಷರ ಪ್ರಿಮಿಯರ್ ಲೀಗ್ ಕ್ರಿಕೆಟ್ ಟೂರ್ನಮೆಂಟ್ ಪಂದ್ಯಾವಳಿಯು ಸರ್ಕಾರಿ ಶಾಲೆಗಳ ಶಿಕ್ಷಕರು,ಸಿಬ್ಬಂದಿ ಮತ್ತು ಅತಿಥಿ ಶಿಕ್ಷಕನ್ನು ಒಳಗೊಂಡ ಕ್ರಿಕೆಟ್ ಪಂದ್ಯಾವಳಿಯು 2022ರಿಂದ ಆರಂಭಗೊಂಡು ಪ್ರಸ್ತುತ 4 ಆವೃತ್ತಿಗಳನ್ನು ಯಶಸ್ವಿಯಾಗಿ ಪೂರ್ಣಗೊಂಡಿರುವದು ವಿಶೇಷವಾಗಿದೆ. ಈ ಅಕ್ಷರ ಟ್ರೋಫಿ ಕ್ರಿಕೆಟ್ ಟೂರ್ನಮೆಂಟ್ ಕಾನ್ಸೆಪ್ಟ್ ಮಾನ್ವಿ ಶಿಕ್ಷಣ ಇಲಾಖೆಯ ಇಸಿಓ ಅಧಿಕಾರಿಗಳಾದ ಎಂ.ಡಿ.ಯೂನಸ್ ಮತ್ತು ಸಂತೋಷ ಈ ಇಬ್ಬರ ಕಾನ್ಸೆಪ್ಟ್ ಇಂದು ಶಿಕ್ಷಕರಲ್ಲಿನ ದೈನಂದಿನ ಒತ್ತಡಗಳನ್ನು ದೂರ ಮಾಡುವದಲ್ಲದೆ.ಅವರಲ್ಲಿನ ಕ್ರೀಡಾ ಪ್ರತಿಭೆಯನ್ನು ಹೊರಸೂಸುವ ವೇದಿಕೆಯಾಗಿ ಹೊರಹೊಮ್ಮಿದೆ.

ಕಳದ ಶನಿವಾರ ಮತ್ತು ಭಾನುವಾರ ಎರಡು ದಿನಗಳ ಕಾಲ ಗ್ರಾಮೀಣ ಹೋಬಳಿ ಭಾಗವಾದ ಪೋತ್ನಾಳ ಸರ್ಕಾರಿ ಪ್ರೌಢಶಾಲೆಯ ವಿಶಾಲವಾದ ಮೈದಾನದಲ್ಲಿ ನಡೆದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮಾನ್ವಿ,ಸಿರವಾರ ತಾಲೂಕಿನಿಂದ ಒಟ್ಟು ನಾಲ್ಕು ತಂಡಗಳು ಮಾನ್ವಿ ಎನ್.ಜಿ.ಒ ಟೈಗರ್ಸ್, ಮಾನ್ವಿ ರಾಯಲ್ಸ್ ಚಾಲೆಂಜರ್ಸ್ ಹಾಗೂ ಮಾನ್ವಿ ರಾಯಲ್ಸ್, ಸಿರವಾರ ರಾಯಲ್ಸ್ ಚಾಲೆಂಜರ್ಸ್ ತಂಡುಗಳ ನಡುವೆ ನಡೆದ ಪಂದ್ಯದಲ್ಲಿ ಮಾನ್ವಿ ರಾಯಲ್ಸ್ ಚಾಲೆಂಜರ್ಸ್ ಮತ್ತು

ಎನ್.ಜಿ.ಒ ಟೈಗರ್ಸ್ ಮಾನ್ವಿ ತಂಡಗಳು ತಲಾ ಎರಡು ಪಂದ್ಯಗಳಲ್ಲಿ ಗೆದ್ದು, ಫೈನಲ್ ಗೆ ಪ್ರವೇಶ ಮಾಡಿದವು. ಎರಡು ಸಮಬಲ ಆಟಗಾರರನ್ನು ಹೊಂದಿದ ತಂಡಗಳಾದ್ದರಿಂದ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಮಾನ್ವಿ ರಾಯಲ್ಸ್ ಚಾಲೆಂಜರ್ಸ್ ತಂಡ 8 ಓವರ್ ಗಳ ಪಂದ್ಯದಲ್ಲಿ 5 ವಿಕೇಟ್ ಗಳ ನಷ್ಟಕ್ಕೆ 83 ರನ್ ಗಳ ಟಾರ್ಗೆಟ್ ನ್ನು ಎನ್.ಜಿ.ಒ ತಂಡಕ್ಕೆ ನೀಡಿದರು. 83 ರನ್‌ಗಳ ಟಾರ್ಗೆಟ್ ಬೆನ್ನಟ್ಟಿದ ಟೈಗರ್ಸ್ ತಂಡ 6 ವಿಕೇಟ್ ಗನ್ನು ಕಳೆದುಕೊಂಡು 83 ರನ್ ಗಳನ್ನು ಗಳಿಸಿ ಪಂದ್ಯ ಡ್ರಾ ಆಯಿತು. ನಂತರ ನಡೆದ ಒಂದು ಸೂಪರ್ ಓವರ್ ನ ಪಂದ್ಯದಲ್ಲಿ ಟೈಗರ್ಸ್ ತಂಡ ಒಂದು ವಿಕೇಟ್ ಕಳೆದುಕೊಂಡು 20 ರನ್ ಗಳನ್ನು ಕಲೆ ಹಾಕುವ ಮೂಲಕ ಎರಡು ತಂಡಗಳ ನಡುವೆ ರಣ ರೋಚಕ ಸ್ಪರ್ಧೆ ಏರ್ಪಟ್ಟಿತು. 20 ರನ್ ಗಳ ಟಾರ್ಗೆಟ್ ಬೆನ್ನಟ್ಟಿದ ಮಾನ್ವಿ ರಾಯಲ್ಸ್ ಚಾಲೆಂಜರ್ಸ್ ತಂಡ 14 ರನ್ ಗಳ ತೀವ್ರ ಪೈಪೋಟಿಯ ನಡುವೆ ಕೊನೆಯ ಬಾಲ್ ಗೆ ಐದು ರನ್ ಗಳ ಅಗತ್ಯ ನಡುವೆ

ಕೊನೆ ಬಾಲ್ ಬ್ಯಾಟಿಗೆ ತಾಕದೆ ಮಿಸ್ ಆಗಿದ್ದರಿಂದ ತೀವ್ರ ಸೆಣಸಾಟದಲ್ಲಿ ಎನ್.ಜಿ.ಒ ಟೈಗರ್ಸ್ 5ರನ್ ಗಳಿಂದ ತಂಡ ಗೆದ್ದು ಬೀಗಿದೆ.

ಎನ್.ಜಿ.ಒ ಟೈಗರ್ಸ್ ಮಾನ್ವಿ ತಂಡ ಮಾಲೀಕ ಎನ್.ಜಿ.ಒ ಅಧ್ಯಕ್ಷ ಸುರೇಶ ಕುರ್ಡಿ ತಂಡದ ನಾಯಕರಾದ ಎನ್ಪಿಎಸ್ ಅಧ್ಯಕ್ಷ ಸುರೇಶ ಕುಮಾರ, ಬಿಆರ್ಪಿ ಸಿದ್ದಲಿಂಗಯ್ಯ, ಹರ್ಷವರ್ಧನ ಹಾಗೂ ತಂಡದ ಆಟಗಾರರಿಗೆ ಫೈನೆಲ್ ಟ್ರೋಫಿ ನೀಡಲಾಯಿತು. ನಂತರ ರಾಯಲ್ಸ್ ಚಾಲೆಂಜರ್ಸ್ ತಂಡದ ಮಾಲೀಕರಾದ ಶಿಕ್ಷಕರ ಸಂಘದ ಅಧ್ಯಕ್ಷ ಸಂಗಮೇಶ ಮುಧೋಳ ಮತ್ತು ಸಿ.ಡಿ.ವಿಜಯ ಕುಮಾರ ತಂಡದ ನಾಯಕ ಸಂದೀಪ್ ಕುಮಾರ ಹಾಗೂ ತಂಡದ ಆಟಗಾರರಿಗೆ ರನ್ನರ್ ಅಪ್ ಟ್ರೋಫಿ ನೀಡಲಾಯಿತು.

ಕ್ರೀಡೆಗಳು ದೈನಂದಿನ ಕೆಲಸ ಕಾರ್ಯಗಳ ಒತ್ತಡವನ್ನು ದೂರ ಮಾಡುವದಲ್ಲದೆ. ವ್ಯಕ್ತಿಯನ್ನು ಮಾನಸಿಕವಾಗಿ, ದೈಹಿಕವಾಗಿ ಆರೋಗ್ಯ ಸದೃಢತೆ ಜೊತೆಗೆ ಉತ್ತಮ ಸ್ಪರ್ಧಾತ್ಮಕ ಮನೋಭಾವ ವೃದ್ಧಿಗೊಳ್ಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಆದ್ದರಿಂದ ನೌಕರ ಸಿಬ್ಬಂದಿಗಳಿಗೆ ಆಗಾಗ್ಗೆ ಇಂತಹ ಕ್ರಿಡೇಗಳು ನಡೆಸುವದು ತುಂಬಾ ಅಗತ್ಯವಿದೆ.

ಈ ಸಂದರ್ಭದಲ್ಲಿ ಸಿರವಾರ ಎನ್.ಜಿ.ಒ ಅಧ್ಯಕ್ಷ ಅರಿಫ್ ಮಿಯಾ, ಎನ್ಜಿಓ ಕಾರ್ಯದರ್ಶಿ ಹಂಪಣ್ಣ ಚಂಡೂರ್, ಮೌನೇಶ ಸಿರವಾರ ಹಾಗೂ ಇಸಿಓ ಅಧಿಕಾರಿಗಳಾದ ಎಂ.ಡಿ.ಯೂನಸ್, ಸಂತೋಷ, ಸಿ.ಆರ್.ಪಿ ಬಸವರಾಜ,ಸುರೇಶ ಕುಮಾರ ಜಗ್ಲಿ, ಶಾಲೆಯ ಮುಖ್ಯ ಶಿಕ್ಷಕ ವಲಿಬಾಬು, ನೀಲಕಂಠ ಸೇರಿದಂತೆ ಮಾನ್ವಿ, ಸಿರವಾರ ವಿವಿಧ ಶಾಲೆಗಳ ಶಿಕ್ಷಕರು ಉಪಸ್ಥಿತರಿದ್ದರು.

# ನಿಸ್ವಾರ್ಥ ಸಹಕಾರವೇ ಸೌಹಾರ್ದ ಸಂಘದ ಅಭಿವೃದ್ಧಿ :ರಂಗನಾಥ ನುಲಿಕಾರ

**ಬೀದರ,ಸೆ.02–**ಒಬ್ಬರು ಎಲ್ಲರಿಗಾಗಿ ಎಲ್ಲರೂ ಒಬ್ಬರಿಗಾಗಿ ಎಂಬ ತತ್ವ ಸಿದ್ಧಾಂತ ಸೌಹಾರ್ದ ಸಂಘದಲ್ಲಿ ನೆಲೆಯುರಬೇಕು. ಇವನಾರವ ಇವನಾರವ ಎಂದು ಭೇಧ ಮಾಡದೇ ಇವ ನಮ್ಮವನೆಂದು ಸಾಲಕೊಟ್ಟರೆ ಸಂಘದ ಅಭಿವೃದ್ಧಿ ಸಾಧ್ಯ. ನುಡಿದಂತೆ ನಡೆದು ವಚನ ಬದ್ಧತೆಯಿಂದ ಪಡೆದ ಸಾಲ ಮರುಪಾವತಿಸಿದರೆ ಸಂಘದ ಸಮೃದ್ಧಿ ಸಾಧ್ಯ ಎಂದು ಡಿಸಿಸಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕೆಆದ ರಂಗನಾಥ ನುಲಿಕಾರ ನುಡಿದರು.ವಚನ ಸೌಹಾರ್ದ ಸಹಕಾರ ಸಂಘದ ವಾರ್ಷಿಕ ಮಹಾಸಭೆಯನ್ನು ಸಸಿಗೆ ನೀರೆರೆದು ಮಾತನಾಡಿದರು. ನೀಡಿದರು.



# ರಾಯಚೂರು ವಾರ್ತಾ ಇಲಾಖೆಯಿಂದ ಬಾಪೂಜಿ ಪ್ರಬಂಧ ಸ್ಪರ್ಧೆ

**ರಾಯಚೂರು,ಸೆ.2–** ಅಕ್ಟೋಬರ್ 2ರಂದು ನಡೆಯುವ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 156ನೇ ಜಯಂತಿಯ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ರಾಯಚೂರ ಕಚೇರಿಯಿಂದ ಬಾಪೂಜಿ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿದೆ.

ವಿದ್ಯಾರ್ಥಿ ಯುವಜನರಲ್ಲಿ ಗಾಂಧೀಜಿಯವರ ಬದುಕು, ಸ್ವಾತಂತ್ರ ಚಳವಳಿ, ಸರಳತೆ, ಅಹಿಂಸಾ ಮಾರ್ಗ, ಸಹಬಾಳ್ವೆ, ಅಸ್ಪೃಶ್ಯತೆ ನಿವಾರಣೆಗಾಗಿ ನಡೆಸಿದ ಪ್ರಯೋಗಗಳು ಮೊದಲಾದ ವಿಷಯಗಳ ಕುರಿತು ಪ್ರೌಢಶಾಲೆ, ಪದವಿ ಪೂರ್ವ ಶಿಕ್ಷಣ ಹಾಗೂ ಪದವಿ–ಸ್ನಾತಕೋತ್ತರ ಪದವಿ ಹಂತದ ವಿದ್ಯಾರ್ಥಿಗಳಿಗೆ ಒಟ್ಟು 3 ವಿಭಾಗಗಳಲ್ಲಿ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಬಾಪೂಜಿ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ.

ಪ್ರೌಢಶಾಲಾ ವಿದ್ಯಾರ್ಥಿಗಳು 1.ಸ್ವಚ್ಚತೆಯ ಪಾಠ–ಗಾಂಧೀಜಿಯವರ ಸಂದೇಶ, 2.ಮಕ್ಕಳ ಭವಿಷ್ಯ ನಿರ್ಮಾಣದಲ್ಲಿ ಗಾಂಧೀಜಿಯವರ ಪಾತ್ರ, 3.ಗಾಂಧೀಜಿಯವರ ಸ್ವಾತಂತ್ರದ ಕನಸು– ನನ್ನ ಕಲ್ಪನೆ ಈ ಮೂರು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು 700 ರಿಂದ 800 ಪದಗಳು ಮೀರದಂತೆ ಪ್ರಬಂಧ ಬರೆಯಬೇಕು.

ಪಿಯುಸಿ ವಿದ್ಯಾರ್ಥಿಗಳು 1.ಅಸ್ಪೃಶ್ಯತೆ ನಿವಾರಣೆಯಲ್ಲಿ ಗಾಂಧೀಜಿಯವರ ಹೋರಾಟ, 2.ಇಂದಿನ ಸಮಾಜದಲ್ಲಿ ಸರ್ವೋದಯ ಮತ್ತು ಅಂತ್ಯೋದಯದ ಪ್ರಾಸಂಗಿಕತೆ ಮತ್ತು 3.ಬದಲಾವಣೆ ನನ್ನಿಂದಲೇ ಆರಂಭ–ಗಾಂಧೀಜಿಯವರ ಪಾಠ ಈ ಮೂರು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು 900 ರಿಂದ 100 ಪದಗಳು ಮೀರದಂತೆ ಪ್ರಬಂಧ ಬರೆಯಬೇಕು.

ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗದ ವಿದ್ಯಾರ್ಥಿಗಳು 1.ಗಾಂಧೀಜಿಯವರು ಕಂಡ ನ್ಯಾಯಸಮ್ಮತ ರಾಜಕೀಯ ವ್ಯವಸ್ಥೆ, 2.ಗಾಂಧೀಜಿ ಮತ್ತು ಡಾ. ಬಿ.ಆರ್.ಅಂಬೇಡ್ಕರ್ – ತತ್ವಗಳ ಹೋಲಿಕೆ, 3.ಮೌಲ್ಯಾಧಾರಿತ ನಾಯಕತ್ವ ಹಾಗೂ ನೈತಿಕ ರಾಜಕಾರಣ – ಯುವಕರಿಗೆ ಗಾಂಧೀಜಿಯವರ ಪಾಠ ಈ ಮೂರು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು 1400 ರಿಂದ 1500 ಪದಗಳು ಮೀರದಂತೆ ಪ್ರಬಂಧ ಬರೆಯಬೇಕು.

ಪ್ರಬಂಧವು ಸಂಪೂರ್ಣವಾಗಿ ಸ್ವರಚಿತವಾಗಿರಬೇಕು., ಸ್ಪರ್ಧೆ ಏರ್ಪಡಿಸುವ ಸ್ಥಳದಲ್ಲಿಯೇ ಶುದ್ಧ ಕೈಬರಹದಲ್ಲಿ ಪ್ರಬಂಧ ಬರೆಯಬೇಕು., ಆಕಾರವಾಗಿ ಬಳಸಿದ ಪರಾಮರ್ಶನ/ ಆಧಾರ ಗ್ರಂಥಗಳ ವಿವರಗಳನ್ನು ಪ್ರಬಂಧದ ಕೊನೆಯಲ್ಲಿ ನಮೂದಿಸಬೇಕು. ಸ್ಪರ್ಧೆ ಏರ್ಪಡಿಸುವ ಸ್ಥಳದಲ್ಲಿ ಪರಾಮರ್ಶನ/ ಆಧಾರಗ್ರಂಥಗಳು/ಮೊಬೈಲ್‌ಗಳ ಬಳಕೆಗೆ ಅವಕಾಶ ವಿರುವುದಿಲ್ಲ., ಪ್ರಬಂಧಕಾರರ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ ನಮೂದಿಸಿರಬೇಕು., ಪ್ರಬಂಧವು ಈ ಮೊದಲು ಎಲ್ಲಿಯೂ ಪ್ರಕಟವಾಗಿರಬಾರದು. ಆಯ್ದ ಪ್ರಬಂಧಗಳ ಪ್ರಕಟಣೆಯ ಹಕ್ಕನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹೊಂದಿರುತ್ತದೆ.

ಪ್ರೌಢಶಾಲಾ, ಪದವಿ ಪೂರ್ವ, ಪದವಿ ಹಾಗೂ ಸ್ನಾತಕೋತ್ತರ ಪದವಿ ಮೂರು ಪ್ರತ್ಯೇಕ ವಿಭಾಗಗಳ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಅಕ್ಟೋಬರ್ 2ರ ಮಹಾತ್ಮಗಾಂಧೀಜಿ ಜಯಂತಿ ಸಮಾರಂಭದಲ್ಲಿ ಜಿಲ್ಲಾಮಟ್ಟದಲ್ಲಿ ತಲಾ ಮೂರು ವಿಭಾಗಗಲ್ಲಿ ಪ್ರಥಮ 3000 ರೂ, ದ್ವಿತೀಯ 2000 ರೂ. ಮತ್ತು ತೃತೀಯ 1000 ರೂ. ನೀಡಲಾಗುತ್ತದೆ. ರಾಜ್ಯಮಟ್ಟದಲ್ಲಿ ತಲಾ ಮೂರು ವಿಭಾಗಗಳಲ್ಲಿ ಪ್ರಥಮ 31000 ರೂ, ದ್ವಿತೀಯ 21,000 ರೂ. ಮತ್ತು ತೃತೀಯ 11,000 ರೂ. ನೀಡಲಾಗುತ್ತದೆ.

ಈ ಬಾಪೂಜಿ ಪ್ರಬಂಧ ಸ್ಪರ್ಧೆಯನ್ನು ಆಯಾ ಪ್ರೌಢಶಾಲೆಗಳು, ಪಿಯು ಕಾಲೇಜುಗಳು ಮತ್ತು ಪದವಿ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರಗಳಲ್ಲಿ ಸೆಪ್ಟೆಂಬರ್ 10ರೊಳಗೆ ನಡೆಸಿ ವಿಜೇತರ ಪಟ್ಟಿಯನ್ನು ಮತ್ತು ಎಲ್ಲ ಪ್ರಬಂಧಗಳನ್ನು ಜಿಲ್ಲಾ ವಾರ್ತಾಧಿಕಾರಿಗಳು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪತ್ರಿಕಾ ಭವನ, ಜಿಲ್ಲಾ ರಂಗಮಂದಿರದ ಹಿಂದುಗಡೆ ಇಲ್ಲಿಗೆ ಸಲ್ಲಿಸಲು ಶಾಲಾ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಕಾಲೇಜು ಶಿಕ್ಷಣ ಇಲಾಖೆ ಮತ್ತು ವಿಶ್ವವಿದ್ಯಾಲಯದ ಕುಲಪತಿಗಳಿಗೆ ಪತ್ರ ಬರೆದು ತಿಳಿಸಲಾಗಿದ್ದು, ಆಸಕ್ತ ವಿದ್ಯಾರ್ಥಿಗಳು ಈ ಪ್ರಬಂಧ ಸ್ಪರ್ಧೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕೋರಿದೆ.

ಈ ಪ್ರಬಂಧ ಸ್ಪರ್ಧೆಯು ಸೆ.10ರೊಳಗೆ ವಸತಿ ನಿಲಯಗಳಲ್ಲಿ ಸಹ ನಡೆಯುತ್ತಿದ್ದು, ಶಾಲಾ–ಕಾಲೇಜುಗಳಲ್ಲಿ ನಡೆಯುವ ಪ್ರಬಂಧ ಸ್ಪರ್ಧೆಯಲ್ಲಿ ಭಾಗಿಯಾಗದ ವಿದ್ಯಾರ್ಥಿಗಳು ಆಯಾ ವಸತಿ ನಿಲಯಗಳಲ್ಲಿ ನಡೆಯುವ ಸ್ಪರ್ಧೆಯಲ್ಲಿ ಪ್ರಬಂಧ ಬರೆದು, ಹೆಸರು, ಶಾಲಾ–ಕಾಲೇಜಿನ ಹೆಸರು, ತರಗತಿ, ವಿಳಾಸ ಬರೆದು ಆಯಾ ವಸತಿ ನಿಲಯಗಳ ಮೇಲ್ವಿಚಾರಕರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ ವಾರ್ತಾ ಸಹಾಯಕರಾದ ಗವಿಸಿದ್ದಪ್ಪ ಹೊಸಮನಿ ಮೊ.9008462236 ಅಥವಾ ಪ್ರಥಮ ದರ್ಜೆ ಸಹಾಯಕರಾದ ಲಿಂಗರಾಜ್ ಮೊ:9743892080 ಇವರಿಗೆ ಸಂಪರ್ಕಿಸಬಹುದಾಗಿದೆ ಎಂದು ರಾಯಚೂರು ವಾರ್ತಾ ಇಲಾಖೆಯ ಕಚೇರಿ ಪ್ರಕಟಣೆ ತಿಳಿಸಿದೆ.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111 9743496111

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H